ಶಾಸ್ತ್ರೀಯ ಭಾಷೆಯ ಪರಿಕಲ್ಪನೆ ಮತ್ತು ಸ್ವರೂಪ

ಲಿಂಗದೇವರು ಹಳೆಮನೆ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

BVP-1211-२७/२/१७
1218- (६).

ಶಾಸ್ತ್ರೀಯ ಭಾಷೆಯ ಪರಿಕಲ್ಪನೆ ಮತ್ತು ಸ್ವರೂಪ

ಲಿಂಗದೇವರು ಹಳೆಮನೆ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

SHASTREEYA BHASHEYA PARIKALPANE MATHU **SWARUPA**
by : **Sri Lingadevaru Halemane**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : 26 + vi   Price : Rs. **10=00** : **2006**

ಪ್ರಥಮ ಮುದ್ರಣ : ೨೦೦೬
ಪ್ರತಿಗಳು : ೫೦೦೦
ಬೆಲೆ : ಹತ್ತು ರೂಪಾಯಿಗಳು

ಮುಖಪುಟ ವಿನ್ಯಾಸ: ಶ್ರೀ ಪುಂಡಲೀಕ ಕಲ್ಲಿಗನೂರು

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

'ಶಾಸ್ತ್ರೀಯ' ಭಾಷೆ : ಇದು ಪ್ರಸ್ತುತದಲ್ಲಿ ಸಾರ್ವಜನಿಕ ವೇದಿಕೆಗಳಲ್ಲಿ, ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ, ವ್ಯಾಪಕ ಚರ್ಚೆ, ವಾದ-ವಿವಾದಗಳಿಗೆ ವಸ್ತುವಾಗಿರುವ ಪದ-ಪುಂಜ. ಕೇಂದ್ರ ಸರಕಾರವು ನಮ್ಮ ನೆರೆರಾಜ್ಯದ ಪ್ರಾಚೀನ ಭಾಷೆಯೊಂದಕ್ಕೆ ಅಧಿಕೃತವಾಗಿ 'ಶಾಸ್ತ್ರೀಯ' (ಕ್ಲಾಸಿಕಲ್) ಸ್ಥಾನವನ್ನು ಕೊಟ್ಟಿರುವಾಗ ಅಷ್ಟೇ ಪ್ರಾಚೀನವಾದ ನಮ್ಮ ಭಾಷೆಗೂ ಆ ಸ್ಥಾನ ದೊರೆಯಬೇಕೆಂದು ಕೇಳುವುದು ನ್ಯಾಯಯುತ.

ಮುಖ್ಯವಾಗಿ ಭಾಷಾವಿಜ್ಞಾನ ವಲಯಕ್ಕೆ ಸೀಮಿತವಾಗಿರುವ ಈ ಪರಿಕಲ್ಪನೆಯನ್ನು ಕುರಿತು ಎಲ್ಲರಿಗೂ ಮನವರಿಕೆಯಾಗುವಂತೆ, ಸರಳ ಶೈಲಿಯಲ್ಲಿ ಬರೆಯಲಾದ ಕೃತಿ ಇದು.

*

ಕ್ಷಿಪ್ರ ಅವಧಿಯಲ್ಲಿ ಈ ಪುಸ್ತಕ ಬರೆದುಕೊಟ್ಟ ಸಿ.ಐ.ಐ.ಎಲ್. (ಮೈಸೂರು) ಪ್ರಾಧ್ಯಾಪಕ ಶ್ರೀ ಲಿಂಗದೇವರು ಹಳೆಮನೆ ಅವರಿಗೆ, ನಮ್ಮ ಮೈಸೂರು ಜಿಲ್ಲೆ ಕ.ಸಾ.ಪ. ಅಧ್ಯಕ್ಷ ಶ್ರೀ ಮಾನಸ ಅವರಿಗೆ, ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿಗೆ ನಾನು ಋಣಿ.

ಈ ಪುಸ್ತಕದ ಪ್ರಕಟಣೆಗಾಗಿ ಕರ್ನಾಟಕ ಸರ್ಕಾರವು ವಿಶೇಷ ಅನುದಾನ ನೀಡಿ ಉಪಕರಿಸಿದೆ. ಸರ್ಕಾರದ ಆದೇಶ ಸಂಖ್ಯೆ: ಸಂಕಇ ೧೭೨ ಕಸಧ ೨೦೦೩ ದಿನಾಂಕ ೧೬-೩-೨೦೦೩. ಈ ಸಹಾಯಕ್ಕಾಗಿ ಪರಿಷತ್ತು ಸರ್ಕಾರಕ್ಕೆ ಕೃತಜ್ಞವಾಗಿದೆ.

ಚಂದ್ರಶೇಖರ ಪಾಟೀಲ(ಚಂಪಾ)
ಅಧ್ಯಕ್ಷರು

ಅರಿಕೆ

ಶಾಸ್ತ್ರೀಯ ಭಾಷೆಯನ್ನು ಕುರಿತಾಗಿ ಇಂದು ಬಿರುಸಿನ ಚರ್ಚೆ ನಡೆಯುತ್ತಿದೆ. ಭಾರತ ಸರ್ಕಾರ ತಮಿಳು ಭಾಷೆಯನ್ನು ಶಾಸ್ತ್ರೀಯ ಭಾಷೆ ಎಂದು ಅಧಿಕೃತವಾಗಿ ಘೋಷಿಸಿದ ನಂತರ, ಕನ್ನಡ ಯಾವ ರೀತಿಯಲ್ಲಿ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಪಡೆಯಲು ಅರ್ಹ ಎಂಬ ಹಕ್ಕೊತ್ತಾಯವನ್ನು ಮಂಡಿಸತೊಡಗಿದ್ದಾರೆ. ಇನ್ನು ಕೆಲವರು ಆ ರೀತಿಯ ಹಕ್ಕೊತ್ತಾಯವನ್ನು ಲಘುವಾಗಿ ಪರಿಗಣಿಸಿ ತಮ್ಮ ಅಭಿಪ್ರಾಯ ಮಂಡಿಸಿದ್ದಾರೆ. ಮತ್ತೆ ಕೆಲವರು ಶಾಸ್ತ್ರೀಯ ಭಾಷೆಯ ಸ್ಥಾನಮಾನ ಸಿಗುವುದರಿಂದ ದೊರಕುವ ಲಾಭಗಳೇನು? ಎಂದು ಪ್ರಶ್ನಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಚಂದ್ರಶೇಖರ ಪಾಟೀಲ ಮತ್ತು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ. ಮಾನಸ ಅವರು ಕೇಳಿಕೊಂಡ ಮೇರೆಗೆ ಈ ಕಿರುಕೃತಿಯನ್ನು ರಚಿಸುವಂತಾಯಿತು.

ಕನ್ನಡ ಸಾಹಿತ್ಯ ಪರಿಷತ್ತಿಗೆ ನನ್ನ ಕೃತಜ್ಞತೆಗಳು.

– ಲಿಂಗದೇವರು ಹಳೆಮನೆ

ಪರಿವಿಡಿ

ಶಾಸ್ತ್ರೀಯ ಭಾಷೆ

೧. ಪ್ರವೇಶ

ಕಳೆದ ಒಂದು ವರ್ಷದಿಂದ 'ಶಾಸ್ತ್ರೀಯ ಭಾಷೆ' ಎಂಬ ಮಾತು ಹೆಚ್ಚಾಗಿ ಕೇಳಿಬರತೊಡಗಿದೆ. ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ, ಕೇಂದ್ರ ಸರ್ಕಾರ ೨೦೦೪ನೇ ಇಸವಿ ಅಕ್ಟೋಬರ್ ೧೨ನೇ ತಾರೀಕು ತನ್ನ ಅಧಿಸೂಚನೆ ಸಂ.ಖಗಿ-೧೪೦೧೪/೭/೨೦೦೪-ಓಖ-ಖಖ ಮೂಲಕ ತಮಿಳು ಭಾಷೆಯನ್ನು ಶಾಸ್ತ್ರೀಯ ಭಾಷೆ ಎಂದು ಘೋಷಿಸಿದಾಗಿನಂದ ಕರ್ನಾಟಕದಲ್ಲಿ ಶಾಸ್ತ್ರೀಯ ಭಾಷೆಯ ಬಗ್ಗೆ ಒಂದು ಸಂಚಲನೆಯೇ ಉಂಟಾಗಿದೆ. ಇಂಗ್ಲೀಷಿನ 'ಕ್ಲಾಸಿಕಲ್ ಲ್ಯಾಂಗ್ವೇಜ್' ಎಂಬುದಕ್ಕೆ ಸಂವಾದಿಯಾಗಿ ಶಾಸ್ತ್ರೀಯ ಭಾಷೆ ಎನ್ನುವ ಪದವನ್ನು ನಾವಿಂದು ಬಳಸುತ್ತಿದ್ದೇವೆ. ಕ್ಲಾಸಿಕಲ್ ಲ್ಯಾಂಗ್ವೇಜ್‌ಗೆ ಸಂವಾದಿಯಾಗಿ 'ಶಾಸ್ತ್ರೀಯ ಭಾಷೆ' ಎಂಬುದನ್ನು ಬಳಸುವುದಕ್ಕೆ ಕೆಲವರ ಆಕ್ಷೇಪವೂ ವ್ಯಕ್ತವಾಗಿದೆ. ತಮಿಳು, ಕನ್ನಡ ಶಾಸ್ತ್ರೀಯ ಭಾಷೆ ಎನ್ನುವುದಾದರೆ ಬೇರೆ ಭಾಷೆಗಳು ಅಶಾಸ್ತ್ರೀಯವೇ? ಎಂಬುದೇ ಅವರ ಆಕ್ಷೇಪಕ್ಕೆ ಕಾರಣ. ತಮಿಳರು ಕ್ಲಾಸಿಕಲ್ ಲ್ಯಾಂಗ್ವೇಜ್‌ಗೆ ಸಂವಾದಿಯಾಗಿ "ಚೆಮ್ಮೊಳಿ" ಎಂದು ಕರೆದಿದ್ದಾರೆ. 'ಚೆಮ್ಮೈ' ಎಂದರೆ ಶ್ರೇಷ್ಠ, ನಯವಾದ, ನೇರವಾದ, ಅದ್ಭುತವಾದ ಎಂಬೆಲ್ಲಾ ಅರ್ಥಗಳಿವೆ. 'ಮೊಳಿ' ಎಂದರೆ ಭಾಷೆ. ನಮ್ಮಲ್ಲಿ 'ಚೆನ್ನುಡಿ' ಎಂಬ ಪಗ ಇದೆ. ಹೆಚ್ಚೂ ಕಡಿಮೆ ಅದೇ ಗೀತಿಯುದು. ಈ ಚೆಮ್ಮೊಳಿ ಎಂಬ ಪದ ಚೆಮ್ಮೈ ಮತ್ತು ಮೊಳಿ ಎಂಬ ಎರಡು ಪದಗಳು ಸೇರಿ ಆಗಿರುವ ಸಂಯುಕ್ತ

ಪದ. ಚೆನ್ + ನುಡಿ ಇದ್ದ ಹಾಗೆ. ಈಗಾಗಲೇ ಶಾಸ್ತ್ರೀಯ ಭಾಷೆ ಎಂಬ ಪದ ಕ್ಲಾಸಿಕಲ್ ಲ್ಯಾಂಗ್ವೇಜ್ ಪದಕ್ಕೆ ಸಂವಾದಿಯಾಗಿ ಬಳಕೆಯಾಗುತ್ತಿರುವುದರಿಂದ ಅದನ್ನೇ ಇಲ್ಲಿಯೂ ಬಳಸಲಾಗಿದೆ.

ಇಲ್ಲಿಯವರೆಗೆ ನಮಗೆ ಕ್ಲಾಸಿಕಲ್ ಲ್ಯಾಂಗ್ವೇಜ್ ಎಂಬ ಪರಿಕಲ್ಪನೆ ಬಗ್ಗೆ ಇದ್ದ ತಿಳುವಳಿಕೆಯೇ ಬೇರೆ. 'ಪುರಾತನ ಭಾಷೆ' ಎಂಬ ಅರ್ಥದಲ್ಲಿಯೇ ನಾವು ಅದನ್ನು ಪರಿಭಾವಿಸಿದ್ದುದು. ಈ ಅರ್ಥದಲ್ಲಿಯೇ ಯುನೆಸ್ಕೊ ಕೆಳಕಂಡ ಭಾಷೆಗಳನ್ನು ಕ್ಲಾಸಿಕಲ್ ಭಾಷೆಗಳೆಂದು ಗುರುತಿಸಿದೆ.

ಇಂಡೋ ಯೂರೋಪಿಯನ್ ಭಾಷೆಗಳು :

೧. ಕ್ಲಾಸಿಕಲ್ ಗ್ರೀಕ್

೨. ಲ್ಯಾಟಿನ್

೩. ಸಂಸ್ಕೃತ

೪.ಕ್ಲಾಸಿಕಲ್ ಪರ್ಷಿಯನ್

ಆಫ್ರೋ-ಏಷಿಯಾಟಿಕ್ ಭಾಷೆಗಳು :೧. ಕ್ಲಾಸಿಕಲ್ ಅರೇಬಿಕ್

೨. ಹೀಬ್ರೂ

ಸಿನೊ-ಟಿಬೆಟಿಯನ್ ಭಾಷೆಗಳು :೧. ಕ್ಲಾಸಿಕಲ್ ಚೈನೀಸ್

ಇಲ್ಲಿ 'ಕ್ಲಾಸಿಕಲ್' ಎಂಬುದಕ್ಕೆ ಸಂವಾದಿಯಾದ ಪದ 'ಪುರಾತನ' ಎಂಬುದು. ಈ ಪುರಾತನ ಭಾಷೆಗಳು ಒಂದೋ ಈಗ 'ಮೃತ' ಭಾಷೆಗಳಾಗಿವೆ ಅಥವಾ ಈಗಿನ ಬಳಕೆಯ ಭಾಷೆಗಿಂತ ಪೂರ್ಣ ಭಿನ್ನವಾಗಿವೆ ಅಥವಾ

ಬೇರೆ ಸ್ವತಂತ್ರ ಭಾಷೆಗಳಿಗೆ ಎಡೆ ಮಾಡಿಕೊಟ್ಟಿವೆ. ಉದಾಹರಣೆಗೆ, ಕ್ಲಾಸಿಕಲ್ ಗ್ರೀಕ್, ಲ್ಯಾಟಿನ್ ಮತ್ತು ಸಂಸ್ಕೃತ ಈಗಾಗಲೇ ಮೃತ ಭಾಷೆಗಳು. ಕ್ಲಾಸಿಕಲ್ ಅರೇಬಿಕ್ ಮತ್ತು ಈಗಿನ ಅರೇಬಿಕ್ ಭಾಷೆಗಳಿಗೆ ತುಂಬಾ ವ್ಯತ್ಯಾಸ ಇದೆ. ಸಂಸ್ಕೃತದಿಂದ ಪಾಳಿ, ಪ್ರಾಕೃತ ಭಾಷೆಗಳು ಸ್ವತಂತ್ರ ಭಾಷೆಗಳಾಗಿ ರೂಪುಗೊಂಡಿವೆ. ಹೀಗೆ ಪ್ರಾಚೀನತೆ ಒಂದು ಕಾಲಕ್ಕೆ ಪುರಾತನ ಭಾಷೆಯನ್ನು ಗುರುತಿಸುವಲ್ಲಿ ಪ್ರಮುಖ ಮಾನದಂಡವಾಗಿತ್ತು. ಆದರೆ ಇವತ್ತು ಆ ಮಾನದಂಡ ಅಷ್ಟಾಗಿ ಉಳಿದಿಲ್ಲ.

೨. ಶಾಸ್ತ್ರೀಯ ಭಾಷೆ ಎಂದರೇನು?

ಭಾರತ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಒಂದು ಭಾಷೆಯನ್ನು ಅಂಗೀಕರಿಸುವುದಕ್ಕೆ ನಾಲ್ಕು ಚಹರೆಗಳನ್ನು ಪಟ್ಟಿ ಮಾಡಿದೆ. ಆ ಚಹರೆಗಳು ಹೀಗಿವೆ.

೧. ಒಂದು ಭಾಷೆಯ ಪಠ್ಯಗಳು/ದಾಖಲಾದ ಇತಿಹಾಸ ಒಂದು ಸಾವಿರ ವರ್ಷಕ್ಕೂ ಪುರಾತನವಾಗಿದ್ದಿರಬೇಕು.

೨. ಪುರಾತನ ಸಾಹಿತ್ಯ/ಪಠ್ಯಗಳು ತಲೆತಲೆಮಾರುಗಳ ಜನರಿಂದ ಅತ್ಯಂತ ಮೌಲಿಕ ಪರಂಪರೆಯೆಂದು ಪರಿಗಣಿತವಾಗಿರಬೇಕು.

೩. ಸಾಹಿತ್ಯಿಕ ಪರಂಪರೆ ಸ್ವೋಪಜ್ಞವಾಗಿದ್ದು ಯಾವುದೇ ಬೇರೊಂದು ಭಾಷೆ/ಸಮುದಾಯದಿಂದ ಸ್ವೀಕಾರವಾಗಿರಬಾರದು.

೪. ಶಾಸ್ತ್ರೀಯ ಭಾಷೆ ಮತ್ತು ಸಾಹಿತ್ಯ ಪ್ರಸ್ತುತ ಭಾಷೆ ಮತ್ತು ಸಾಹಿತ್ಯಕ್ಕಿಂತ ಭಿನ್ನವಾಗಿರಬೇಕು ಅಥವಾ ಇತ್ತೀಚಿನ ಸ್ವರೂಪಕ್ಕಿಂತ ಅಥವಾ ಅದರಿಂದ ಬೆಳವಣಿಗೆ ಹೊಂದಿದ ಭಾಷೆಗಳಿಗಿಂತ ಬೇರೆಯದೇ ಎನ್ನಿಸುವ ಹಾಗಿರಬೇಕು. (ಉದಾಹರಣೆಗೆ, ಲ್ಯಾಟಿನ್‌ಗಿಂತ ರೋಮನ್; ಸಂಸ್ಕೃತ – ಪಾಳಿಗಿಂತ ಪ್ರಾಕೃತ ಮತ್ತು ಆಧುನಕ ಇಂಡೊ ಆರ‍್ಯನ್ ಭಾಷೆಗಳು ಭಿನ್ನವಾಗಿರುವ ಹಾಗೆ)

ಸರ್ಕಾರ ಈ ಮೇಲಿನ ಚಹರೆಗಳನ್ನು ನಿಗದಿಪಡಿಸಿರುವುದರಿಂದಾಗಿ, ಕ್ಲಾಸಿಕಲ್ ಲ್ಯಾಂಗ್ವೇಜ್ ಬಗ್ಗೆ ನಮಗಿದ್ದ ಪರಿಕಲ್ಪನೆಯೇ ಈಗ ಬದಲಾಗಿದೆ. ಈ ಚಹರೆಗಳನ್ನು ಪ್ರಕಟಪಡಿಸಿದ ಕೂಡಲೇ ಭಾರತ ಸರ್ಕಾರ ತಮಿಳು ಭಾಷೆಯನ್ನು ಶಾಸ್ತ್ರೀಯ ಭಾಷೆ ಎಂದು ಅಧಿಕೃತವಾಗಿ ಘೋಷಿಸಿತು. ಸರ್ಕಾರದ ಈ ಕ್ರಮ ಎಂತಹವರಿಗಾದರೂ ಆಶ್ಚರ್ಯ ತರುವಂತಹದು. ಯಾಕೆಂದರೆ, ಸಂಸ್ಕೃತವನ್ನು ಈಗಾಗಲೇ ಕ್ಲಾಸಿಕಲ್ ಭಾಷೆ ಎಂದು ಮಾನಸಿಕವಾಗಿ, ಬೌದ್ಧಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಎಲ್ಲರೂ ಒಪ್ಪಿಕೊಂಡಿದ್ದರು. ಯುನೆಸ್ಕೊ ಕೂಡಾ ಅದನ್ನು ಅಧಿಕೃತವಾಗಿ ಕ್ಲಾಸಿಕಲ್ ಭಾಷೆ ಎಂದು ಒಪ್ಪಿಕೊಂಡಿತ್ತು. ಯೂರೋಪ್, ಅಮೆರಿಕಾ ದೇಶಗಳಲ್ಲಿ ಅದನ್ನು ಕ್ಲಾಸಿಕಲ್ ಭಾಷೆಯೆಂದೇ ಅನೇಕ ವಿಶ್ವವಿದ್ಯಾಲಯಗಳಲ್ಲಿ ಬೋಧಿಸಲಾಗುತ್ತಿದೆ. ಇಷ್ಟಾದರೂ ಭಾರತ ಸರ್ಕಾರ ಮಾತ್ರ ಅಧಿಕೃತವಾಗಿ ಕ್ಲಾಸಿಕಲ್ ಭಾಷೆ ಎಂದು ಘೋಷಿಸಿದ್ದು ಸಂಸ್ಕೃತ ಭಾಷೆಯನ್ನಲ್ಲ, ತಮಿಳು ಭಾಷೆಯನ್ನು. ಈಗ ಒಂದು ತಿಂಗಳ

ಹಿಂದೆ ಅಂದರೆ, ತಮಿಳು ಭಾಷೆಯನ್ನು ಕ್ಲಾಸಿಕಲ್ ಲ್ಯಾಂಗ್ವೇಜ್ ಎಂದು ಘೋಷಿಸಿದ ಒಂದು ವರ್ಷದ ನಂತರ ಸಂಸ್ಕೃತ ಭಾಷೆಯನ್ನು ಕ್ಲಾಸಿಕಲ್ ಲ್ಯಾಂಗ್ವೇಜ್ ಎಂದು ಸರ್ಕಾರ ಘೋಷಿಸಿದೆ.

ತಮಿಳು ಭಾಷೆಯನ್ನು ಶಾಸ್ತ್ರೀಯ ಭಾಷೆ ಎಂದು ಘೋಷಿಸಿದ ಕೂಡಲೇ ಅದರ ಹಿಂದಿರಬಹುದಾದ ರಾಜಕೀಯವನ್ನು ಕುರಿತಾಗಿ ಬಹುದೊಡ್ಡ ಕಟು ಟೀಕೆಯೇ ಕೇಳಿ ಬಂತು. ಒಂದು ಭಾಷೆಗೆ ವಿಶೇಷ ಸ್ಥಾನ ಕೊಟ್ಟು ಬೇರೆ ಭಾಷೆಗಳನ್ನು ಕೇಂದ್ರ ಸರ್ಕಾರ ಕಡೆಗಣಿಸುತ್ತಿದೆಯೆಂಬ ಆರೋಪ ಕೇಳಿ ಬಂತು. ತಮಿಳಿನ ಜ್ಞಾತಿ ಭಾಷೆಯಾದ ಕನ್ನಡಕ್ಕೂ ಶಾಸ್ತ್ರೀಯ ಸ್ಥಾನಮಾನದ ಅರ್ಹತೆ ಸಿಗಬೇಕು ಎಂಬ ವಾದ ಮುಖ್ಯವಾಗಿ ಕರ್ನಾಟಕದಿಂದ ಕೇಳಿಬರತೊಡಗಿತು. ಕರ್ನಾಟಕದ ಸಾಹಿತಿಗಳು, ಬುದ್ಧಿ ಜೀವಿಗಳು, ಭಾಷಾ ಹೋರಾಟಗಾರರು ತಮ್ಮ ಹಕ್ಕೊತ್ತಾಯವನ್ನು ಅತ್ಯಂತ ತಾರ್ಕಿಕವಾಗಿ ಮಂಡಿಸತೊಡಗಿದರು. ಈ ಒತ್ತಡವನ್ನು ಮನಗಂಡ ಕೇಂದ್ರ ಸರ್ಕಾರ ಭಾಷಾ ವಿಜ್ಞಾನಿಗಳ ಒಂದು ಸಮಿತಿಯನ್ನು ರಚಿಸಿ, ಈ ರೀತಿಯ ಬೇಡಿಕೆಗಳನ್ನು ಪರಿಶೀಲಿಸಿ ಅಭಿಪ್ರಾಯ ನೀಡುವಂತೆ ಕೇಳಿಕೊಂಡಿದೆ. ಅಷ್ಟೇ ಅಲ್ಲ, ಈ ರೀತಿಯ ಬೇಡಿಕೆಗಳು ಇನ್ನು ಮುಂದೆ ಹೆಚ್ಚಾಗಬಹುದೆಂಬ ಭೀತಿಯಿಂದ ಈ ಮೊದಲು ನಿಗದಿಪಡಿಸಿದ್ದ, ಚಹರೆ ಒಂದರಲ್ಲಿದ್ದ 'ಒಂದು ಸಾವಿರ ವರ್ಷ'ದ ಪ್ರಾಚೀನತೆಯ ಅವಧಿಯನ್ನು 'ಒಂದೂವರೆ ಸಾವಿರ ವರ್ಷ'ಕ್ಕೆ ಏಕಾಏಕಿ ಏರಿಸಿಬಿಟ್ಟಿದೆ. ಈಗ ತಮ್ಮ ಭಾಷೆಗೆ ಶಾಸ್ತ್ರೀಯ ಪಟ್ಟ ಬೇಕೆನ್ನುವವರು ಅದಕ್ಕೆ

ಒಂದೂವರೆ ವರ್ಷಗಳ ದೀರ್ಘ ಇತಿಹಾಸ ಇದೆ ಎಂಬುದನ್ನು ಪುರಾವೆಗಳ ಮೂಲಕ ಸಾಬೀತು ಮಾಡಿ ತೋರಿಸಬೇಕು. ಇಲ್ಲಿ ಮತ್ತೆ ಏಳುವ ಪ್ರಶ್ನೆ ಎಂದರೆ, ತಮಿಳು ಭಾಷೆಯನ್ನು ಶಾಸ್ತ್ರೀಯ ಭಾಷೆ ಎಂದು ಘೋಷಿಸುವಾಗ ಒಂದು ಸಾವಿರ ವರ್ಷದ ಪ್ರಾಚೀನತೆಯನ್ನು ಒಂದು ಚಹರೆಯಾಗಿ ಒಪ್ಪಿಕೊಂಡ ಸರ್ಕಾರ, ಈಗ ಇದ್ದಕ್ಕಿದ್ದಂತೆ ಅವಧಿಯನ್ನು ಒಂದೂವರೆ ಸಾವಿರ ವರ್ಷಕ್ಕೆ ಏರಿಸಿದ್ದೇಕೆ? ಇದೆಂಥಾ ರಾಜಕೀಯ? ಎಂದು ಯಾರಿಗಾದರೂ ಅನ್ನಿಸದೇ ಇರದು.

೩. ಭಾಷಾ ರಾಜಕೀಯ

ತಮಿಳು ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಸಿಗಬೇಕೆಂಬ ಬೇಡಿಕೆ ಮತ್ತು ಒತ್ತಾಯ ಇಂದು, ನಿನ್ನೆಯದಲ್ಲ. ತಮಿಳರಿಗೆ ತಮ್ಮ ಭಾಷೆ, ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ಪ್ರಚಂಡ ಅಭಿಮಾನ. ಆ ವಿಷಯದಲ್ಲಿ ಅವರನ್ನು ಮನಸಾರೆ ಮೆಚ್ಚಬೇಕು. ಬೇರೊಂದು ಭಾಷೆ ಮತ್ತು ಸಂಸ್ಕೃತಿ ತಮ್ಮ ಭಾಷೆಯ ಮೇಲೆ ಮತ್ತು ಸಂಸ್ಕೃತಿಯ ಮೇಲೆ ಸವಾರಿ ಮಾಡುವುದನ್ನು ಅವರು ಎಂದೂ ಸಹಿಸಿದವರಲ್ಲ. ಅಂಥ ಪ್ರಯತ್ನಗಳನ್ನು ಉದ್ದಕ್ಕೂ ವಿರೋಧಿಸಿಕೊಂಡು ಬಂದವರು.

ತಮಿಳು ಭಾಷೆಯನ್ನು ಶಾಸ್ತ್ರೀಯ ಭಾಷೆಯಾಗಿ ಅಧಿಕೃತವಾಗಿ ಘೋಷಿಸಬೇಕೆಂಬ ಒತ್ತಾಯವನ್ನು ೧೮೮೭ರಷ್ಟು ಹಿಂದೆಯೇ ಪರುತ್ತಿಮಲ್ ಕಲೈಂಗ್ನರ್ ಎಂಬ ವಿದ್ವಾಂಸರು ಪ್ರಾರಂಭಿಸಿದ್ದರು. ಅಂದಿನಿಂದ ಅದನ್ನು ಶಾಸ್ತ್ರೀಯ ಭಾಷೆ ಎಂದು ಘೋಷಿಸುವವರೆಗೆ ಒಂದೇ ಸಮನಾದ ಒತ್ತಡವನ್ನು

ತಮಿಳುನಾಡು ಸರ್ಕಾರಗಳು ಕೇಂದ್ರ ಸರ್ಕಾರದ ಮೇಲೆ ಕಾಲದಿಂದ ಕಾಲಕ್ಕೆ ಹೇರುತ್ತಾ ಬಂದವು. ೨೦೦೦ನೇ ಇಸವಿ ಏಪ್ರಿಲ್ ತಿಂಗಳಿನಲ್ಲಿ ಬರ್ಕಲಿಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಸಂಸ್ಕೃತ ಮತ್ತು ತಮಿಳು ಪ್ರಾಧ್ಯಾಪಕ ಜಾರ್ಜ್ ಎಲ್. ಹಾರ್ಟ್ ಎಂಬುವರು ಅಂತರ್ಜಾಲದಲ್ಲಿ ಬರೆದ ಒಂದು ಲೇಖನ ಅವರ ಬೇಡಿಕೆಗೆ ಮತ್ತಷ್ಟು ಪುಷ್ಟಿ ನೀಡಿತು. ಅವರು ಲೇಖನದಲ್ಲಿ ತಮಿಳು ಭಾಷೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಪಡೆಯಲು ಯಾಕೆ ಅರ್ಹ ಎಂಬುದಕ್ಕೆ ನಾಲ್ಕು ಕಾರಣಗಳನ್ನು ನೀಡಿದ್ದರು.

ಮೊದಲನೆಯದಾಗಿ ತಮಿಳು ಭಾಷೆಗೆ ಸಾಕಷ್ಟು ಪುರಾತನತೆ ಇದೆ. ಅದು ಬೇರೆ ಭಾರತೀಯ ಆಧುನಿಕ ಭಾಷೆಗಳ ಸಾಹಿತ್ಯಕ್ಕೆ ಹೋಲಿಸಿದರೆ ಒಂದು ಸಾವಿರ ವರ್ಷಕ್ಕಿಂತ ಹಿಂದಿನಿಂದಲೂ ಸಾಹಿತ್ಯವನ್ನು ಹೊಂದಿದೆ. ಅದರ ಅತ್ಯಂತ ಪ್ರಾಚೀನ ಕೃತಿಗಳಾದ ತೊಲ್ಕಾಪ್ಪಿಯಂನಲ್ಲಿ ನಮೂದಾಗಿರುವ ಅಂಶಗಳಿಂದ ಮತ್ತು ಪ್ರಾರಂಭದ ತಮಿಳು ಶಾಸನಗಳಿಂದ ಈ ಭಾಷೆ ಕ್ರಿ.ಪೂ. ೨೦೦ ರಿಂದಲೂ ಅಸ್ತಿತ್ವದಲ್ಲಿತ್ತೆಂದು ತಿಳಿದು ಬರುತ್ತದೆ. ಪ್ರಾಚೀನ ತಮಿಳಿನ ಮಹತ್ವದ ಕೃತಿಗಳಾದ ಸಂಗಂ ಕಾವ್ಯ ಸಂಗ್ರಹಗಳು ಮತ್ತು 'ಪುಟ್ಟಪ್ಪಾಟ್ಟು' ಒಂದು, ಎರಡನೇ ಶತಮಾನಕ್ಕೆ ಸೇರಿದವು. ಅವು ಭಾರತದ ಪ್ರಪ್ರಥಮ ಜಾತ್ಯಾತೀತ ಕಾವ್ಯಭಾಗಗಳಾಗಿದ್ದು ಕಾಳಿದಾಸನ ಕಾವ್ಯಗಳಿಗಿಂತ ಇನ್ನೂರು ವರ್ಷಗಳು ಹಿಂದಿನವುಗಳಾಗಿವೆ.

ಎರಡನೆಯದಾಗಿ, ಭಾರತದಲ್ಲಿ ಸಂಸ್ಕೃತ ಭಾಷೆಯಿಂದ ಪ್ರಭಾವಗೊಳ್ಳದ ಏಕೈಕ ದೇಸೀ ಸಾಹಿತ್ಯವೆಂದರೆ ತಮಿಳು ಭಾಷೆಯದು.

ಇದು ಸಂಸ್ಕೃತ ಭಾಷೆ ಬೇರೆ ಭಾರತೀಯ ಭಾಷೆಗಳ ಮೇಲೆ ತನ್ನ ಪ್ರಭಾವ ಬೀರುವ ಮೊದಲೇ ಅಸ್ತಿತ್ವದಲ್ಲಿದ್ದು ಸಂಸ್ಕೃತ ಮತ್ತು ಇನ್ನಿತರ ಭಾಷೆಗಳ ಸಾಹಿತ್ಯಕ್ಕಿಂತ ಗುಣಮಟ್ಟದಲ್ಲಿ ಭಿನ್ನವಾಗಿದೆ. ಅದಕ್ಕೆ ಅದರದ್ದೇ ಆದ ಕಾವ್ಯಮೀಮಾಂಸೆ, ವ್ಯಾಕರಣ ಪರಂಪರೆ, ಸೌಂದರ್ಯ ಮೀಮಾಂಸೆ ಮತ್ತು ಇವೆಲ್ಲಕ್ಕಿಂತ ಅನನ್ಯವಾದ ಬಹುದೊಡ್ಡ ಸಾಹಿತ್ಯ ಭಂಡಾರವೇ ಇದೆ. ಸಂಸ್ಕೃತ ಅಥವಾ ಇನ್ನಿತರ ಭಾರತೀಯ ಭಾಷೆಗಳಿಗಿಂತ ಭಿನ್ನವಾದ ಭಾರತೀಯ ಸಂವೇದನೆಯನ್ನು ಇದು ಹೊಂದಿದ್ದು ತನ್ನದೇ ಆದ ಶ್ರೀಮಂತ ಮತ್ತು ವಿಶಾಲವಾದ ಬೌದ್ಧಿಕ ಪರಂಪರೆಯನ್ನು ಹೊಂದಿದೆ.

ಮೂರನೆಯದಾಗಿ, ಕ್ಲಾಸಿಕಲ್ ತಮಿಳು ಸಾಹಿತ್ಯದ ಗುಣವೆಂದರೆ, ಅದು ಸಂಸ್ಕೃತ, ಗ್ರೀಕ್, ಲ್ಯಾಟಿನ್, ಚೈನೀಸ್, ಪರ್ಷಿಯನ್ ಮತ್ತು ಅರೆಬಿಕ್‌ನಂತಹ ಭಾಷೆಗಳ ಶ್ರೇಷ್ಠ ಸಾಹಿತ್ಯದ ಜೊತೆ ಸರಿಸಮನಾಗಿ ನಿಲ್ಲಬಲ್ಲುದು. ಅದರ ಸೂಕ್ಷ್ಮತೆ ಮತ್ತು ಸಮಗ್ರತೆ, ವೈವಿಧ್ಯತೆ (ಅಲಕ್ಷಿತರ ಬಗ್ಗೆ ವಿಶೇಷವಾಗಿ ಗಮನ ಹರಿಸಿರುವ ಆಧುನಿಕ ಪೂರ್ವ ಸಾಹಿತ್ಯ ಅದೊಂದೆ) ಮತ್ತು ಅದರ ಜಾಗತಿಕ ದೃಷ್ಟಿಕೋನ ಅದನ್ನು ಜಗತ್ತಿನ ಶ್ರೇಷ್ಠ ಕ್ಲಾಸಿಕಲ್ ಪರಂಪರೆ ಮತ್ತು ಸಾಹಿತ್ಯವನ್ನಾಗಿಸಿದೆ. ತಿರುಕ್ಕುರಳ್ ಜಗತ್ತಿನ ಶ್ರೇಷ್ಠ ನೀತಿಶಾಸ್ತ್ರ ಕೃತಿಯೆಂಬುದು ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ಇದು ಅತಿದೊಡ್ಡ ತಮಿಳು ಕ್ಲಾಸಿಕಲ್ ಪರಂಪರೆಯ ಒಂದು ಭಾಗ ಅಷ್ಟೆ. ಈ ಶ್ರೇಷ್ಠ ಸಾಹಿತ್ಯ ಅನ್ವೇಷಿಸದ ಮತ್ತು ಬೆಳಗದ ಮಾನವ ಅಸ್ತಿತ್ವದ ಯಾವ ಮುಖವೂ ಇಲ್ಲವೆಂದೇ ಹೇಳಬಹುದು.

ಕೊನೆಯದಾಗಿ, ತಮಿಳು ಭಾಷೆ ಆಧುನಿಕ ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ಪ್ರಮುಖ ಮೂಲ ಮಾತೃಕೆ. ನಾನು ದಕ್ಷಿಣ ಭಾರತದ ಪರಂಪರೆ ಸಂಸ್ಕೃತ ಕಾವ್ಯ ಪರಂಪರೆಯ ಮೇಲೆ ಬೀರಿರುವ ಪ್ರಭಾವದ ಬಗ್ಗೆ ಸಾಕಷ್ಟು ಬರೆದಿದ್ದೇನೆ. ಪ್ರಮುಖವಾದ ಅಂಶವೆಂದರೆ, ಸಂಗಂ ಕಾವ್ಯ ಸಂಕಲನಗಳಿಂದ ಆರಂಭಗೊಂಡು ಬೆಳೆದು ಬಂದ ತಮಿಳು ಹಿಂದೂವಾದದ ಕೃತಿಗಳು ಆಧುನಿಕ ಹಿಂದೂವಾದಕ್ಕೆ ಸಾಕಷ್ಟು ಪುಷ್ಟಿ ನೀಡಿವೆ. ಅವರ ಚಿಂತನೆಗಳನ್ನು ಭಾರತದಾದ್ಯಂತ ಹರಡುವುದಕ್ಕೆ ಪ್ರಾರಂಭಿಸಿದಾಗ ಭಾಗವತ ಪುರಾಣ ಮತ್ತು ಇನ್ನಿತರ ಪಠ್ಯಗಳು (ತೆಲುಗು, ಕನ್ನಡ ಮತ್ತು ಸಂಸ್ಕೃತವೂ ಸೇರಿ) ಸ್ವೀಕರಿಸಿವೆ. ತಮಿಳಿಗೆ ಅದರದೇ ಆದ ವೇದಕ್ಕೆ ಸಮಾನವಾದ ಮಂತ್ರಗಳಿದ್ದು ದಕ್ಷಿಣ ಭಾರತದ ವೈಷ್ಣವ ದೇವಸ್ಥಾನಗಳಲ್ಲಿ (ತಿರುಪತಿ) ವೇದದ ಜೊತೆಗೆ ಅವನ್ನೂ ಪಠಿಸಲಾಗುತ್ತಿದೆ. ಆಧುನಿಕ ಇಂಡೊ–ಆರ್ಯನ್ ಭಾಷೆಗಳಿಗೆ ಸಂಸ್ಕೃತ ಮಾತೃಸ್ಥಾನದಲ್ಲಿರುವ ಹಾಗೆ ಕ್ಲಾಸಿಕಲ್ ತಮಿಳು ಭಾಷೆ ಆಧುನಿಕ ತಮಿಳು ಮತ್ತು ಮಲಯಾಳಂ ಭಾಷೆಗಳಿಗೆ ಮಾತೃಸ್ಥಾನದಲ್ಲಿದೆ. ಇಂಡೊ–ಆರ್ಯನ್ ಭಾಷೆಗಳಲ್ಲಿ ಸಂಸ್ಕೃತ ಅತ್ಯಂತ ಸಾಂಪ್ರದಾಯಿಕ ಭಾಷೆಯಾಗಿದ್ದು ಹೆಚ್ಚು ಬದಲಾವಣೆ ಹೊಂದದೆ ಇರುವ ಹಾಗೆ ದ್ರಾವಿಡ ಭಾಷೆಗಳಲ್ಲಿ ತಮಿಳು ಅತ್ಯಂತ ಸಾಂಪ್ರದಾಯಿಕ ಭಾಷೆಯಾಗಿದೆ. ಭಾಷಾ ವಿಜ್ಞಾನಿಗಳು ದ್ರಾವಿಡ ಭಾಷೆಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಇರುವ ಆಧಾರ ಅದೊಂದೇ.

ಈ ನಾಲ್ಕು ಚಹರೆಗಳನ್ನು ಗುರುತಿಸಿರುವ ಹಾರ್ಟ್ ಕಡೆಯಲ್ಲಿ ಶಾಸ್ತ್ರೀಯ ಭಾಷೆಯಾಗಿ ಒಂದು ಭಾಷೆಯನ್ನು ಪರಿಗಣಿಸಲು ಈ ಕೆಳಗಿನ

ಚಹರೆಗಳು ಇರಬೇಕು ಎಂದು ಗುರುತಿಸುತ್ತಾರೆ.

೧. ಒಂದು ಭಾಷೆ ಪುರಾತನವಾಗಿರಬೇಕು.

೨. ಅದು ಸ್ವತಂತ್ರ ಪರಂಪರೆಯನ್ನು ಹೊಂದಿದ್ದು ತನ್ನಷ್ಟಕ್ಕೆ ತಾನೇ ಬೆಳೆದಿರಬೇಕು. ಬೇರೊಂದು ಭಾಷೆಯಿಂದ ಒಡಮೂಡಿರಬಾರದು.

೪. ಸಮೃದ್ಧವಾದ ಹಾಗೂ ಸಂಪತ್ಭರಿವಾದ ಪ್ರಾಚೀನ ಇತಿಹಾಸ ಹೊಂದಿರಬೇಕು.

ಭಾರತ ಸರ್ಕಾರ ರೂಪಿಸಿರುವ ಶಾಸ್ತ್ರೀಯ ಭಾಷೆಯ ಚಹರೆಗಳು ಹಾರ್ಟ್ ತಿಳಿಸಿರುವ ಚಹರೆಗಳಿಗಿಂತ ಭಿನ್ನವಾಗೇನೂ ಇಲ್ಲ. ಹಾಗೆ ನೋಡಿದರೆ, ಹಾರ್ಟ್ ಹೇಳಿರುವ ಚಹರೆಗಳನ್ನೇ ಅವರು ಅಧಿಕೃತವಾಗಿ ಅಂಗೀಕರಿಸಿದಂತೆ ತೋರುತ್ತದೆ. ತಮಿಳು ಭಾಷೆಯನ್ನು ಗಮನದಲ್ಲಿಟ್ಟುಕೊಂಡೇ ಆ ಚಹರೆಗಳನ್ನು ರೂಪಿಸಿದಂತೆ ಕಾಣುತ್ತದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶ ಇದೆ. ಹಾರ್ಟ್ ತಮಿಳು ಭಾಷೆಯ ಒಳಗೇ ಎರಡು ಸ್ಥಿತ್ಯಂತರಗಳನ್ನೂ ಗುರುತಿಸಿದ್ದಾರೆ. ಒಂದು, ಕ್ಲಾಸಿಕಲ್ ತಮಿಳು, ಇನ್ನೊಂದು ಅಧುನಿಕ ತಮಿಳು. ಈ ಎರಡು ತಮಿಳು ಭಾಷಾ ಸ್ಥಿತ್ಯಂತರದ ಮಧ್ಯೆ ಇರಬಹುದಾದ ಬೃಹತ್ ವ್ಯತ್ಯಾಸವನ್ನು ಅವರು ಮುಖ್ಯ ಮಾನದಂಡವನ್ನಾಗಿಸಿಕೊಂಡಿದ್ದಾರೆ. ಭಾರತ ಸರ್ಕಾರವೂ ಅದನ್ನು ಒಪ್ಪಿಕೊಂಡಿದೆ.

ತಮಿಳು ಭಾಷೆಯನ್ನು ಅಧಿಕೃತ ಶಾಸ್ತ್ರೀಯ ಭಾಷೆಯಾಗಿ ಘೋಷಿಸಬೇಕೆಂಬ ಒತ್ತಡ ಪ್ರಾರಂಭವಾದದ್ದು ೨೦೦೪ ರಲ್ಲಿ ದ್ರಾವಿಡ ಮುನ್ನೇತ್ರ

ಕಳಗಂ ಮತ್ತು ಅದರ ಮಿತ್ರ ಪಕ್ಷಗಳು ಲೋಕಸಭಾ ಚುನಾವಣೆಯಲ್ಲಿ ಎಲ್ಲಾ ಸ್ಥಾನಗಳನ್ನೂ ಗೆದ್ದುಕೊಂಡ ಮೇಲೆ. ತಮಿಳುನಾಡು ಸರ್ಕಾರಗಳು ಸದಾಕಾಲ ಭಾಷೆಯನ್ನು ರಾಜಕೀಯದ ಜೊತೆ ಬೆರೆಸುತ್ತಲೇ ಬಂದಿವೆ. ಕೇಂದ್ರದ ಯು.ಪಿ.ಎ. ಸರ್ಕಾರಕ್ಕೆ ಡಿ.ಎಂ.ಕೆ. ಮತ್ತು ಮಿತ್ರಪಕ್ಷಗಳ ಪೂರಾ ಬೆಂಬಲ ಅನಿವಾರ್ಯವಾಗಿತ್ತು. ಆಗ ಡಿ.ಎಂ.ಕೆ. ಮುಂದಿಟ್ಟ ಮುಖ್ಯ ಅಜೆಂಡಾ ಎಂದರೆ ತಮಿಳು ಭಾಷೆಯನ್ನು ಕ್ಲಾಸಿಕಲ್ ಭಾಷೆ ಎಂದು ಘೋಷಿಸುವುದನ್ನು. ಪಾಪ, ಸಂಸ್ಕೃತ ಭಾಷೆಗೆ ಆ ರೀತಿ ಬೇಡಿಕೆಯ ಒತ್ತಾಯ ಸಲ್ಲಿಸುವ ಸ್ಥಿತಿಯಲ್ಲಿ ಯಾವ ರಾಜಕೀಯ ಪಕ್ಷಗಳೂ ಇರಲಿಲ್ಲ. ತಮಿಳುನಾಡಿನ ಭಾಷಾ ರಾಜಕೀಯ ಒತ್ತಡ ಎಷ್ಟು ತೀವ್ರವಾಗಿತ್ತೆಂದರೆ ಯು.ಪಿ.ಎ. ಸರ್ಕಾರ ರೂಪಿಸಿದ "ರಾಷ್ಟ್ರೀಯ ಕನಿಷ್ಠ ಸಾಮಾನ್ಯ ಕಾರ್ಯಕ್ರಮ"ದಲ್ಲಿ ತಮಿಳು ಭಾಷೆಯನ್ನು ಕ್ಲಾಸಿಕಲ್ ಭಾಷೆಯಾಗಿ ಘೋಷಿಸುವುದನ್ನು ಒಂದು ಕಾರ್ಯಕ್ರಮವೆಂದು ಸೇರಿಸಲಾಯಿತು.

ಆ ಭಾಗ ಹೀಗಿದೆ.

"ಯು.ಪಿ.ಎ. ಸರ್ಕಾರ ಸಂವಿಧಾನದ ಎಂಟನೇ ಅನುಸೂಚಿಯಲ್ಲಿ ನಮೂದಾಗಿರುವ ಎಲ್ಲಾ ಭಾಷೆಗಳನ್ನು ಅಧಿಕೃತ ಆಡಳಿತ ಭಾಷೆಗಳೆಂದು ಘೋಷಿಸಲು ಒಂದು ಸಮಿತಿಯನ್ನು ನೇಮಿಸುತ್ತದೆ. ಜೊತೆಗೆ ತಮಿಳು ಭಾಷೆಯನ್ನು ಕ್ಲಾಸಿಕಲ್ ಭಾಷೆ ಎಂದು ಘೋಷಿಸಲಾಗುತ್ತದೆ."

ಇದು ಭಾಷಾ ರಾಜಕೀಯ. ಸಂವಿಧಾನದ ಎಂಟನೇ ಅನುಸೂಚಿಯಲ್ಲಿ ಉಲ್ಲೇಖಿತವಾಗಿರುವ ಭಾಷೆಗಳ ಬಗ್ಗೆ ಸರ್ಕಾರ ಇನ್ನೂ ಸಮಿತಿಯನ್ನು ನೇಮಿಸಬೇಕಾಗಿದೆ. ಆದರೆ ತಮಿಳು ಭಾಷೆಯನ್ನು ಈಗಾಗಲೇ

ಕ್ಲಾಸಿಕಲ್ ಭಾಷೆ ಎಂದು ಘೋಷಿಸಲಾಗಿದೆ. ಅಷ್ಟೇ ಅಲ್ಲ, ತಮಿಳು ಭಾಷೆಯನ್ನು **ಮಾತ್ರ** ಏಕಕಾಲದಲ್ಲಿ ಕ್ಲಾಸಿಕಲ್ ಭಾಷೆ ಎಂದು ಘೋಷಿಸಬೇಕು. ಅದರ ಜೊತೆ ಯಾವುದೇ ಬೇರೆ ಭಾಷೆಯನ್ನು ಕ್ಲಾಸಿಕಲ್ ಭಾಷೆ ಎಂದು ಘೋಷಿಸಬಾರದು ಮತ್ತು ಕನಿಷ್ಠ ಪಕ್ಷ ಒಂದು ವರ್ಷದವರೆಗೆ ಈ ನಿಯಮವನ್ನು ಪಾಲಿಸಬೇಕು ಎಂಬ ಷರತ್ತನ್ನೂ ತಮಿಳುನಾಡಿನ ಪ್ರಭಾವಿ ರಾಜಕೀಯ ನಾಯಕರೊಬ್ಬರು ಹಾಕಿದ್ದರೆಂಬ ಮಾತು ಕೇಳಿ ಬರುತ್ತಿದೆ. ಕಾಕತಾಳೀಯವೆಂಬಂತೆ ಒಂದು ವರ್ಷದ ನಂತರ ಸಂಸ್ಕೃತ ಭಾಷೆಯನ್ನು ಕ್ಲಾಸಿಕಲ್ ಭಾಷೆ ಎಂದು ಭಾರತ ಸರ್ಕಾರ ಘೋಷಿಸಿದೆ.

೪. ಶಾಸ್ತ್ರೀಯ ಭಾಷೆಯಿಂದ ಆಗುವ ಪ್ರಯೋಜನಗಳು

ಒಂದು ಭಾಷೆಯನ್ನು ಶಾಸ್ತ್ರೀಯ ಭಾಷೆ ಎಂದು ಘೋಷಿಸುವುದರಿಂದ ದೊರೆಯುವ ಪ್ರಯೋಜನಗಳೇನು, ಲಾಭಗಳೇನು ಎಂಬುದರ ಬಗ್ಗೆ ಸಹಜವಾಗಿಯೇ ಕುತೂಹಲಗಳು ಏಳುತ್ತಿವೆ. ಈಗಾಗಲೇ ಪತ್ರಿಕೆಗಳಲ್ಲಿ ಕೆಲವರು ತಮ್ಮ ಊಹೆಗೆ ಅನುಗುಣವಾಗಿ ಕೆಲವಾರು ಕೋಟಿ ಹಣ ಲಭ್ಯವಾಗುತ್ತದೆ ಎಂಬ ಹೇಳಿಕೆಗಳನ್ನು ನೀಡಿದ್ದಾರೆ. ಇನ್ನು ಕೆಲವರು ಶಾಸ್ತ್ರೀಯ ಭಾಷೆಯಿಂದಾಗುವ ಅನುಕೂಲಗಳ ಬಗ್ಗೆ ಮಾಹಿತಿ ತಿಳಿದುಕೊಳ್ಳಲು ಕುತೂಹಲಿಗಳಾಗಿದ್ದಾರೆ. ಇಲ್ಲಿ ಆರ್ಥಿಕ ಲಾಭಕ್ಕಿಂತ ಹೆಚ್ಚಾಗಿ ಆ ಭಾಷೆಗೆ ದೊರಕುವ ಪ್ರತಿಷ್ಠಿತ ಸ್ಥಾನಮಾನಗಳು ಪ್ರಧಾನವಾಗುತ್ತವೆ. ಭಾರತದಂತಹ ಬಹುಭಾಷಾ ದೇಶದಲ್ಲಿ ಭಾಷೆಯ ಸ್ಥಾನಮಾನವೂ ಒಂದು ಬಹುಮುಖ್ಯ ಪ್ರತಿಷ್ಠಿತ ಮಾನದಂಡವಾಗಿದೆ. ಜೊತೆಗೆ ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆಯ

ಅಭಿವೃದ್ಧಿಗೆ ಒದಗಿಸಲಿರುವ ಆರ್ಥಿಕ ಸಹಾಯವೂ ಗಣನೀಯವಾಗಿರುತ್ತದೆ. ತಮಿಳು ಭಾಷೆಯನ್ನು ಕ್ಲಾಸಿಕಲ್ ಭಾಷೆ ಎಂದು ಕೇಂದ್ರ ಸರ್ಕಾರ ಘೋಷಿಸಿದ ಸಂದರ್ಭಲ್ಲಿಯೇ ಶಾಸ್ತ್ರೀಯ ಭಾಷೆಗೆ ಒದಗಿಸಲಿರುವ ಲಾಭಗಳನ್ನು ಹೀಗೆ ಪಟ್ಟಿಮಾಡಿತ್ತು.

೧) ಪ್ರತಿವರ್ಷ ಎರಡು ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಭಾರತೀಯ ಶಾಸ್ತ್ರೀಯ ಭಾಷೆಗಳ ಬಗ್ಗೆ ಕೆಲಸ ಮಾಡಿರುವ ಶ್ರೇಷ್ಠ ವಿದ್ವಾಂಸರುಗಳಿಗೆ ನೀಡಲಾಗುವುದು.

೨) ಶಾಸ್ತ್ರೀಯ ಭಾಷೆಯ ಅಧ್ಯಯನಕ್ಕೆ ಒಂದು ಉನ್ನತ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲಾಗುವುದು.

೩) ವಿಶ್ವವಿದ್ಯಾಲಯ ಧನ ಸಹಾಯ ಆಯೋಗವನ್ನು ಕೇಳಿಕೊಂಡು ಕಡೇ ಪಕ್ಷ ಕೇಂದ್ರಿಯ ವಿಶ್ವವಿದ್ಯಾಲಯಗಳಲ್ಲಿ ಕೆಲವು ಅಧ್ಯಯನ ಪೀಠಗಳನ್ನು ಶಾಸ್ತ್ರೀಯ ಭಾಷೆಯ ಬಗ್ಗೆ ತೆರೆಯಲಾಗುವುದು.

ಮೇಲೆ ತಿಳಿಸಿದ ಅಂಶಗಳನ್ನು ಅನಂತರ ವಿಸ್ತರಿಸಿ ವಿವರವಾದ ಕಾರ್ಯ ಚಟುವಟಿಕೆಗಳನ್ನು ಕೇಂದ್ರ ಯೋಜನೆಯಡಿ 'ತಮಿಳು ಭಾಷಾಭಿವೃದ್ಧಿ ಯೋಜನೆ'ಯಡಿ ಇತ್ತೀಚಿಗೆ ಪ್ರಕಟಿಸಲಾಗಿದೆ. ವಾಸ್ತವವಾಗಿ ಶಾಸ್ತ್ರೀಯ ಭಾಷೆಯ ಅಭಿವೃದ್ದಿಗೆ ಹಣದ ಕೊರತೆ ಇಲ್ಲ. ಕೇಂದ್ರ ಸರ್ಕಾರ ಸೂಕ್ತ ಕಂಡ ಯೋಜನಗಳಿಗೆಲ್ಲಾ ಹಣ ಮಂಜೂರು ಮಾಡಲು ಸಿದ್ಧವಾಗಿದೆ. ಇಷ್ಟಿದ್ದೂ ತಮಿಳು ವಿದ್ವಾಂಸರನೇಕರು ಈಗಾಗಲೇ ಕೇಂದ್ರ ಸರ್ಕಾರ ಸಂಸ್ಕೃತ

ಭಾಷಾಭಿವೃದ್ಧಿಗೆ ನೀಡುತ್ತಿರುವಷ್ಟೇ ಹಣವನ್ನು ತಮಿಳು ಭಾಷಾಭಿವೃದ್ಧಿಗೂ ನೀಡಬೇಕೆಂದು ಒತ್ತಾಯ ಹೇರುತ್ತಿದ್ದಾರೆ.

'ತಮಿಳು ಭಾಷಾಭಿವೃದ್ಧಿ ಯೋಜನೆ'ಯ ಉದ್ದೇಶಿತ ಕಾರ್ಯಕ್ರಮಗಳು ಹೀಗಿವೆ.

೧. ಈ ಯೋಜನೆಯ ಮುಖ್ಯ ಉದ್ದೇಶ ತಮಿಳು ಭಾಷೆಯನ್ನು ತಮಿಳು ಮಾತನಾಡುವ ಮತ್ತು ಮಾತನಾಡದಿರುವ ಪ್ರದೇಶಗಳಲ್ಲಿ ಅಭಿವೃದ್ಧಿಗೊಳಿಸುವುದು, ಪ್ರಚಾರಮಾಡುವುದು ಮತ್ತು ಸಂರಕ್ಷಿಸುವುದು.

೨. ಹೀಗೆ ಮಾಡುವಾಗ ಯೋಜನೆ ಪೂರ್ಣವಾಗಿ ಶಾಸ್ತ್ರೀಯ ತಮಿಳಿನ ಮೇಲೆ ಕೇಂದ್ರೀಕೃತವಾಗಿರುತ್ತದೆ. ಅಧ್ಯಯನದ ಶಿಸ್ತುಗಳ ಎಲ್ಲೆಗಳನ್ನು ದಾಟಿ ಭಾಷಾ ವಿಜ್ಞಾನಿಗಳು, ಸಾಹಿತಿಗಳು, ಇತಿಹಾಸಕಾರರು, ಸಂಶೋಧಕರು, ಪುರಾತತ್ವಶಾಸ್ತ್ರಜ್ಞರು, ಕಲಾ ಇತಿಹಾಸಕಾರರು, ಶಾಸನತಜ್ಞರು ಮುಂತಾದವರನ್ನು ಒಂದೆಡೆ ತಂದು ಶಾಸ್ತ್ರೀಯ ತಮಿಳಿನ ವಿವಿಧ ಅಂಶಗಳನ್ನು ಸಂಶೋಧಿಸಲಾಗುವುದು ಮತ್ತು ಅನ್ವೇಷಿಸಲಾಗುವುದು. ಅಲ್ಲದೆ ಇನ್ನಿತರ ಪ್ರಮುಖ ದ್ರಾವಿಡ ಭಾಷೆಗಳ ಮೇಲೆ ಶಾಸ್ತ್ರೀಯ ತಮಿಳು ಭಾಷೆ ಬೀರಿರುವ ಪ್ರಭಾವಗಳನ್ನು ಅಧ್ಯಯನ ಮಾಡಲಾಗುವುದು.

೩. ಶಾಸ್ತ್ರೀಯ ತಮಿಳಿನ ಬಗ್ಗೆ ವಿಶಿಷ್ಟ ಅಧ್ಯಯನ ಮಾಡಿ ವಿಶೇಷ ಕೊಡುಗೆ ನೀಡಿರುವ ವಿದ್ವಾಂಸರುಗಳಿಗೆ ಪ್ರಶಸ್ತಿ ನೀಡಿ

ಗೌರವಿಸಲಾಗುವುದು. ಅಂಥ ವಿದ್ವಾಂಸರಿಗೆ ನಗದು ಬಹುಮಾನ ಮತ್ತು ಗೌರವ ಪತ್ರ ನೀಡಲಾಗುವುದು. ಪ್ರಶಸ್ತಿಯ ವಿವರಗಳು ಹೀಗಿವೆ.

೩.೧. ಎರಡು ಅಂತಾರಾಷ್ಟ್ರೀಯ ಪ್ರಶಸ್ತಿಗಳು. ಈ ಎರಡರಲ್ಲಿ ಒಂದು ಭಾರತೀಯ ರಾಷ್ಟ್ರೀಯನಾಗಿದ್ದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದವರಿಗೆ, ಇನ್ನೊಂದು ಅನಿವಾಸ ಭಾರತೀಯನಿಗೆ. ಈ ಪ್ರಶಸ್ತಿಯ ಮೊತ್ತ ತಲಾ ಒಂದು ಲಕ್ಷರೂಪಾಯಿಗಳು.

೩.೨. ಒಂದು ರಾಷ್ಟ್ರೀಯ ಪ್ರಶಸ್ತಿ. ಇದು ಒಂದು ಲಕ್ಷ ರೂಪಾಯಿ ಮೊತ್ತದ್ದು.

೩.೩. ಐದು ತರುಣ ವಿದ್ವಾಂಸರಿಗೆ ಅಂದರೆ ೩೦ ರಿಂದ ೪೦ ವರ್ಷ ವಯಸ್ಸಿನಲ್ಲಿರುವವರಿಗೆ ನೀಡುವ ಪ್ರಶಸ್ತಿಗಳು. ಇವುಗಳ ಮೊತ್ತ ತಲಾ ಐವತ್ತು ಸಾವಿರ ರೂಪಾಯಿಗಳು.

ಈ ಮೇಲೆ ತಿಳಿಸಿದ ಪ್ರಶಸ್ತಿಗಳೆಲ್ಲವೂ ಶಾಸ್ತ್ರೀಯ ತಮಿಳಿಗೆ ವಿಶೇಷ ಕೊಡುಗೆ ನೀಡಿದವರಿಗೆ ಮಾತ್ರ ಎಂಬುದನ್ನು ಗಮನಿಸಬೇಕು.

ಅನಂತರದ ಬೆಳವಣಿಗೆ:

ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಪ್ರಶಸ್ತಿಗಳಿಗೆ ಘೋಷಿಸಿರುವ ಒಂದು ಲಕ್ಷರೂಪಾಯಿ ನಗದು ಹಣ ಕಡಿಮೆ ಮೊತ್ತದ್ದು ಹಾಗೂ ಪ್ರಶಸ್ತಿಯ ಗೌರವವನ್ನು ಕಡಿಮೆ ಮಾಡುವಂಥದ್ದು ಎಂದು ತಮಿಳುನಾಡಿನ ರಾಜಕಾರಣಿಗಳು ಮಾನವ ಸಂಪನ್ಮೂಲ ಸಚಿವಾಲಯದ ಮೇಲೆ ಒತ್ತಡ ತಂದು ಜ್ಞಾನಪೀಠ ಪ್ರಶಸ್ತಿ ನೀಡುತ್ತಿರುವ ಐದು ಲಕ್ಷ ರೂಪಾಯಿಯಷ್ಟೇ

ಹಣವನ್ನು ಈ ಪ್ರಶಸ್ತಿಗಳಿಗೂ ನೀಡಬೇಕೆಂದು ಒತ್ತಾಯ ಹೇರಿದ್ದರು. ಅವರ ಒತ್ತಾಯಕ್ಕೆ ಮಣಿದ ಮಾನವ ಸಂಪನ್ಮೂಲ ಸಚಿವಾಲಯ ಮೂರು ಪ್ರಶಸ್ತಿಗಳನ್ನು ಎರಡಕ್ಕೆ ಇಳಿಸಿ ಒಂದು ಅಂತಾರಾಷ್ಟ್ರೀಯ ಪ್ರಶಸ್ತಿ ಮತ್ತು ಒಂದು ರಾಷ್ಟ್ರೀಯ ಪ್ರಶಸ್ತಿ ನೀಡುವುದಾಗಿ ಒಪ್ಪಿಕೊಂಡಿದೆ. ಪ್ರಶಸ್ತಿಯ ತಲಾ ಮೊತ್ತ ಐದು ಲಕ್ಷರೂಪಾಯಿಗಳು. ಯುವ ವಿದ್ವಾಂಸರ ಪ್ರಶಸ್ತಿಗಳು ಮೂಲದಲ್ಲಿ ಇದ್ದ ಹಾಗೇ ಇವೆ. ಅಂತಾರಾಷ್ಟ್ರೀಯ ಪ್ರಶಸ್ತಿಗೆ "ತೊಲ್ಕಾಪ್ಪಿಯರ್" ಪ್ರಶಸ್ತಿ ಎಂದೂ ರಾಷ್ಟ್ರೀಯ ಪ್ರಶಸ್ತಿಗೆ "ತಿರುವಳ್ಳುವರ್ ಪ್ರಶಸ್ತಿ" ಎಂದೂ ನಾಮಕರಣ ಮಾಡಲಾಗಿದೆ. ಒಂದು ಪಕ್ಷ ಯಾವುದೇ ವರ್ಷ ಅಂತಾರಾಷ್ಟ್ರೀಯ ಪ್ರಶಸ್ತಿಗೆ ಸೂಕ್ತ ವಿದ್ವಾಂಸರು ಸಿಗದೇ ಹೋದರೆ, ಆ ಪ್ರಶಸ್ತಿಯನ್ನು ಆ ವರ್ಷ ರಾಷ್ಟ್ರೀಯ ಪ್ರಶಸ್ತಿ ಎಂದು ಘೋಷಿಸಬೇಕೆಂಬ ತಮಿಳುನಾಡಿನ ಕೋರಿಕೆಯನ್ನು ಕೇಂದ್ರ ಸರ್ಕಾರ ಒಪ್ಪಿದೆ.

೪. ತಮಿಳು ಭಾಷಾ ಅಭಿವೃದ್ಧಿ ಯೋಜನೆಗೆಂದು ಒಂದು ಬೋರ್ಡ್ ಅನ್ನು ಭಾರತ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯ ಸ್ಥಾಪಿಸುವುದು. ಈ ಬೋರ್ಡ್ ತಮಿಳು ಭಾಷಾ ಅಭಿವೃದ್ಧಿಯ ವಿವಿಧ ಅಯಾಮಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸೂಕ್ತ ಸಲಹೆ ಮತ್ತು ನಿರ್ದೇಶನಗಳನ್ನು ನೀಡುವ ಜವಾಬ್ದಾರಿ ಹೊಂದಿರುತ್ತದೆ. ಈ ಬೋರ್ಡಿನ ಅಧ್ಯಕ್ಷರಾಗಿ ತಮಿಳಿನ ಶ್ರೇಷ್ಠ ವಿದ್ವಾಂಸರೊಬ್ಬರನ್ನು ಮಾನವ ಸಂಪನ್ಮೂಲ ಸಚಿವಾಲಯ ನಾಮಕರಣ ಮಾಡುತ್ತದೆ.

ಜೊತೆಗೆ ಹತ್ತು ಜನ ವಿದ್ವಾಂಸರನ್ನು ಪರಿಣಿತರೆಂದು ಸದಸ್ಯರನ್ನಾಗಿ ನಾಮಕರಣ ಮಾಡುತ್ತದೆ. ಇವರ ಸೇವಾ ಅವಧಿ ಮೂರು ವರ್ಷಗಳು.

೫. ಶಾಸ್ತ್ರೀಯ ತಮಿಳು ಭಾಷೆಯ ಅಭಿವೃದ್ಧಿಗಾಗಿ ಒಂದು ಉನ್ನತ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲಾಗುವುದು. ಈ ಉನ್ನತ ಅಧ್ಯಯನ ಕೇಂದ್ರ ಗುಣಮಟ್ಟದ ಸಂಶೋಧನೆ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸುವುದು. ಉದ್ದೇಶಿತ ಚಟುವಟಿಕೆಗಳು ಹೀಗಿವೆ.

೫.೧ ಪ್ರಾಚೀನ ತಮಿಳಿನ ಕಾಲದ ದಾಖಲಾತಿ, ಮತ್ತು ಶಾಸ್ತ್ರೀಯ ತಮಿಳಿನ ಬಗ್ಗೆ ದೃಶ್ಯ ಚಿತ್ರಗಳ ತಯಾರಿ.

೫.೨ ತಮಿಳಿನಲ್ಲಿ ಅಂತರ್ಜಾಲ ಬೋಧನಾ ಕೋರ್ಸ್ ಪ್ರಾರಂಭ.

೫.೩ ದ್ರಾವಿಡ ಭಾಷೆಗಳ ಐತಿಹಾಸಿಕ ತೌಲನಿಕ ಅಧ್ಯಯನ.

೫.೪ ಶಾಸ್ತ್ರೀಯ ತಮಿಳಿನ ವಿವಿಧ ಆಯಾಮಗಳ ಸಂಶೋಧನೆ ಮತ್ತು ಅಧ್ಯಯನ.

೫.೫ ಶಾಸ್ತ್ರೀಯ ತಮಿಳು ಕೃತಿಗಳನ್ನು ಬೇರೆ ಭಾಷೆಗಳಿಗೆ ಅನುವಾದಿಸುವುದು.

ಈ ಎಲ್ಲಾ ಕೆಲಸ ನಿರ್ವಹಿಸಲು ಬೇಕಾದ ವಿದ್ವಾಂಸರನ್ನು, ಸಂಶೋಧಕರನ್ನು ಉನ್ನತ ಅಧ್ಯಯನ ಕೇಂದ್ರದಲ್ಲಿ ಒಪ್ಪಂದದ ಮೇರೆಗೆ ನಿರ್ದಿಷ್ಟ ಅವಧಿಗೆ ನೇಮಿಸಿಕೊಳ್ಳಲಾಗುವುದು. ಭಾಷಾ ವಿಜ್ಞಾನಿಗಳು, ಸಾಹಿತ್ಯದ

ವಿದ್ವಾಂಸರು, ಚರಿತ್ರೆಯ ವಿದ್ವಾಂಸರು, ನಿಘಂಟುಕಾರರು, ಹಸ್ತಪ್ರತಿ ತಜ್ಞರು, ದಾಖಲಾತಿ ಪರಿಣಿತರು, ತಂತ್ರಜ್ಞರು ಮುಂತಾದವರು ಈ ತಂಡದಲ್ಲಿರುತ್ತಾರೆ. ಇದರ ಜೊತೆಗೆ ಬೇಕಾದ ಎಲ್ಲಾ ರೀತಿಯ ಆಧುನಕ ತಾಂತ್ರಿಕ ಸಲಕರಣೆಗಳನ್ನು ಒದಗಿಸಲಾಗುವುದು.

೬. ಕ್ಲಾಸಿಕಲ್ ತಮಿಳು ಭಾಷೆಯನ್ನು ಕುರಿತು ಸಂಶೋಧನೆ ನಡೆಸಲು ಹತ್ತು ಜನರಿಗೆ ಡಾಕ್ಟರೇಟ್ ಫೆಲೋಶಿಪ್ ಅನ್ನು ನೀಡಲಾಗುವುದು. ಒಂದೊಂದು ಫೆಲೋಶಿಪ್‌ನ ಮೊತ್ತ ತಿಂಗಳಿಗೆ ಹತ್ತು ಸಾವಿರ ರೂಪಾಯಿಗಳು. ಇದಲ್ಲದೆ, ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಮಾದರಿಯಲ್ಲಿ ಐದು ಪೋಸ್ಟ್ ಡಾಕ್ಟರಲ್ ಫೆಲೋಶಿಪ್ ನೀಡಲಾಗುವುದು.

ಈ ಮೇಲ್ಕಂಡ ಎಲ್ಲಾ ವೆಚ್ಚಗಳನ್ನು ಭರಿಸಲು ಅನುಕೂಲವಾಗುವಂತೆ ೨೦೦೬ ರ ಮಾರ್ಚ್‌ವರೆಗೆ ಭಾರತ ಸರ್ಕಾರ ಈಗಾಗಲೇ ಮೂರು ಕೋಟಿ ಮೂವತ್ತೆರಡು ಲಕ್ಷದಷ್ಟು ಹಣ ಬಿಡುಗಡೆ ಮಾಡಿದೆ. ಈ ಹಣ ಸಾಲದೆಂಬಂತೆ, ತಮಿಳು ರಾಜಕಾರಣಿಗಳು ಈಗಾಗಲೇ ಇನ್ನೂ ಹೆಚ್ಚಿನ ಹಣ ಬಿಡುಗಡೆ ಮಾಡುವಂತೆ ಬೇಡಿಕೆ ಮುಂದಿಟ್ಟಿದ್ದಾರೆ. ಸಂಸ್ಕೃತ ಭಾಷೆಗೆ ವರ್ಷವೊಂದಕ್ಕೆ ೧೩೦೦ ಕೋಟಿ ರೂಪಾಯಿ ಬಿಡುಗಡೆ ಮಾಡಲು ಸಾಧ್ಯವಾಗುವುದಾದರೆ ಅಷ್ಟೇ ಮೊತ್ತದ ಹಣವನ್ನು ತಮಿಳು ಭಾಷೆಗೂ ಬಿಡುಗಡೆ ಮಾಡಬೇಕೆಂಬುದು ಅವರ ಆಗ್ರಹ. ಹಣಕ್ಕೇನೂ ಕೊರತೆ ಇಲ್ಲ, ಆದರೆ ಸರಿಯಾದ ಕಾರ್ಯಕ್ರಮ

ತೋರಿಸಿ, ಹಣ ಬಿಡುಗಡೆ ಮಾಡುತ್ತೇವೆ ಎಂಬ ಧೋರಣೆ ಭಾರತ ಸರ್ಕಾರದ್ದು.

೫. ಕನ್ನಡದ ಸಮಸ್ಯೆಗಳು ಏನು?

ಕನ್ನಡದ ಪ್ರಪ್ರಥಮ ಸಮಸ್ಯೆ ರಾಜಕೀಯ ಇಚ್ಛಾಶಕ್ತಿ. ಕೇಂದ್ರ ಸರ್ಕಾರದಲ್ಲಿ ಪಟ್ಟು ಹಿಡಿದು ಕನ್ನಡದ, ಕರ್ನಾಟಕದ ಕೆಲಸವನ್ನು ಮಾಡಿಸಿಕೊಂಡು ಬರುವ ಒಬ್ಬನೇ ಒಬ್ಬ ಧೀಮಂತ ರಾಜಕಾರಿಣಿ ನಮ್ಮಲ್ಲಿಲ್ಲ. ಕೆಲವೊಮ್ಮೆ ಕರ್ನಾಟಕದ ಕೆಲಸ ಮಾಡಿಕೊಂಡು ಬಂದರೂ ಬರಬಹುದು, ಕನ್ನಡದ ಕೆಲಸವನ್ನಂತೂ ಖಂಡಿತ ಮಾಡಿಸಿಕೊಂಡು ಬರುವ ಮನಸ್ಥಿತಿ ಅವರಿಗಿಲ್ಲ. ಕನ್ನಡಕ್ಕೆ ಏಳು ಜ್ಞಾನಪೀಠ ಪ್ರಶಸ್ತಿ ಬಂದಿದೆ ಎಂದು ವೇದಿಕೆ ಮೇಲಿಂದ ಭಾಷಣ ಬಿಗಿಯುತ್ತಾರೆ. ಆ ಜ್ಞಾನಪೀಠ ಪ್ರಶಸ್ತಿಯನ್ನೇನಾದರೂ ಕೇಂದ್ರ ಸರ್ಕಾರವೇ ಕೊಡುವುದಿದ್ದರೆ, ಅಲ್ಲಿ ರಾಜಕಾರಿಣಿಗಳ ಮಾತು ನಡೆಯುವುದಿದ್ದರೆ, ಆಗ ಅಷ್ಟೂ ಜ್ಞಾನಪೀಠ ಪ್ರಶಸ್ತಿಗಳು ತಮಿಳುನಾಡಿಗೇ ಹೋಗಿ ಬಿಡುತ್ತಿದ್ದವೋ ಏನೋ? ಇದನ್ನು ಇಷ್ಟೊಂದು ತೀವ್ರವಾಗಿ ಹೇಳುವುದಕ್ಕೆ ಕಾರಣ ಇಷ್ಟೇ. ಭಾಷೆಯ ವಿಷಯಕ್ಕೆ ಬಂದಾಗ ತಮಿಳು ರಾಜಕಾರಿಣಿಗಳು ತಳೆಯುವ ಮನಸ್ಥಿತಿಗೂ ನಮ್ಮ ರಾಜಕಾರಿಣಿಗಳು ತಳೆಯುವ ಮನಸ್ಥಿತಿಗೂ ಇರುವ ವ್ಯತ್ಯಾಸ ಹೇಳುವುದಕ್ಕೆ ಅಷ್ಟೆ.. ಕನ್ನಡದ ಶಾಸ್ತ್ರೀಯ ಭಾಷೆಯ ಸ್ಥಾನಮಾನದ ಬಗ್ಗೆ ಮಾತನಾಡುವಾಗ ಇಲ್ಲಿಯವರೆಗೆ ನಮ್ಮ ರಾಜ್ಯದ ಮೂರ್ನಾಲ್ಕು ಸಂಸತ್ ಸದಸ್ಯರು ಮಾತ್ರ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನಮ್ಮ ಎರಡನೆಯ ಸಮಸ್ಯೆಯೆಂದರೆ, ಈಗ ಭಾರತ ಸರ್ಕಾರ ಪ್ರಕಟಪಡಿಸಿರುವ ಕ್ಲಾಸಿಕಲ್ ಭಾಷೆಯ ಬಗೆಗಿನ ನಾಲ್ಕು ಚಹರೆಗಳ ಚೌಕಟ್ಟಿನಲ್ಲಿ ಕನ್ನಡ ಭಾಷೆಯನ್ನು ಕೂರಿಸುವ ಕೆಲಸ ಮಾಡುತ್ತಿರುವುದು. ಭಾರತ ಸರ್ಕಾರ ಮುಖ್ಯವಾಗಿ ತಮಿಳು ಭಾಷೆಯನ್ನು ಗಮನದಲ್ಲಿಟ್ಟುಕೊಂಡು ಆ ಚಹರೆಗಳನ್ನು ರೂಪಿಸಿದೆ. ಸಂಸ್ಕೃತ ಭಾಷೆ ಅನಾಯಾಸವಾಗಿ ಆ ಚೌಕಟ್ಟಿಗೆ ಹೊಂದಿಕೊಳ್ಳುವ ಸ್ಥಿತಿಯಲ್ಲಿದೆ. ಅಷ್ಟು ಸಾಕು ಕೇಂದ್ರ ಸರ್ಕಾರಕ್ಕೆ. ಮಿಕ್ಕ ಭಾಷೆಯವರು ಕ್ಲಾಸಿಕಲ್ ಸ್ಥಾನಮಾನ ಕೇಳಿಯಾರೆಂಬ ಹೆದರಿಕೆಯಿಂದ ಈಗ ಭಾಷೆಯ ಪ್ರಾಚೀನತೆಯನ್ನು ಒಂದು ಸಾವಿರ ವರ್ಷದಿಂದ ಒಂದೂವರೆ ಸಾವಿರ ವರ್ಷದವರೆಗೆ ಏರಿಸಿದ್ದಾರೆ. ಇದು ರಾಜಕೀಯವಲ್ಲದೆ ಮತ್ತೇನಾಗಿರಲು ಸಾಧ್ಯ? ಇಷ್ಟಾದರೂ ಕನ್ನಡ ಭಾಷೆ ಒಂದೂವರೆ ಸಾವಿರ ವರ್ಷಗಳ ಇತಿಹಾಸವನ್ನು ಬಹಳ ಸುಲಭವಾಗಿ ಸಾಧಿಸಿ ತೋರಿಸಬಹುದಾದ ಸ್ಥಿತಿಯಲ್ಲಿದೆ. ಆದರೆ, ಇನ್ನಿತರ ಚಹರೆಗಳನ್ನು ಅಷ್ಟು ಸುಲಭವಾಗಿ ಸಾಧಿಸಿ ತೋರಿಸಲು ಸಾಧ್ಯವಿಲ್ಲ. ಆ ರೀತಿಯ ಪ್ರಯತ್ನಕ್ಕೆ ಆಧಾರಗಳು ನಿರ್ದಿಷ್ಟತೆಯ ಮಾನದಂಡಕ್ಕೆ ಸುಲಭವಾಗಿ ದೊರೆಯುವಂತಹ ಸ್ಥಿತಿಯಲ್ಲಿ ಇಲ್ಲ. ಬರೀ ಉಲ್ಲೇಖಗಳು ಆಧಾರಗಳಾಗುವುದಿಲ್ಲ. ಅದ್ದರಿಂದ ನಾವು ಮೊದಲು ಮಾಡಬೇಕಾದ ವಿಷಯವೆಂದರೆ, ಭಾರತ ಸರ್ಕಾರ ರೂಪಿಸುವ ಚಹರೆಗಳಲ್ಲಿ ಸೂಕ್ತ ಮಾರ್ಪಾಟು ಮಾಡಬೇಕೆಂದು ಒತ್ತಾಯ ತರುವುದು.

ಈಗಾಗಲೇ ಕನ್ನಡದ ಹಿರಿಯ ವಿದ್ವಾಂಸರುಗಳು ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಸಿಗುವುದಕ್ಕೆ ಇರುವ ಅರ್ಹತೆಗಳ ಪಟ್ಟಿ ಮಾಡಿ

ಭಾರತ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಯಾವುದೇ ಕೋನದಿಂದ ನೋಡಿದರೂ ನಮ್ಮ ಹಿರಿಯರು ಪಟ್ಟಿ ಮಾಡಿರುವ ಆಧಾರಗಳು ಭಾರತ ಸರ್ಕಾರ ರೂಪಿಸಿರುವ ಚಹರೆಗಳಿಗೆ ಸಂಪೂರ್ಣವಾಗಿ ಹೊಂದಿಕೆಯಾಗುತ್ತಿಲ್ಲ ಎನ್ನುವುದು ಸೂಕ್ಷ್ಮವಾಗಿ ಅವಲೋಕಿಸಿದವರಿಗೆ ತಿಳಿಯುತ್ತದೆ. ಅದರ ಕಡೆ ಕೊಂಚ ಗಮನ ಹಾಯಿಸಬೇಕು.

ಮೊದಲನೆಯ ಚಹರೆ, ಒಂದು ಭಾಷೆಯ ಪಠ್ಯಗಳು/ದಾಖಲಾದ ಇತಿಹಾಸ ಒಂದು ಸಾವಿರ ವರ್ಷಕ್ಕೂ ಪುರಾತನವಾಗಿರಬೇಕು ಎಂಬುದು. (ಈಗ ಅದನ್ನು ಸಾವಿರದ ಐನೂರು ವರ್ಷಕ್ಕೆ ಒಯ್ದಿದ್ದಾರೆ). ಇಲ್ಲಿಯವರೆಗೆ ನಾವು ಒದಗಿಸಿರುವ ಪುರಾವೆಗಳು ಇತಿಹಾಸದ್ದಾಗಿದೆಯೇ ಹೊರತು ಪಠ್ಯಕ್ಕೆ ಸಂಬಂಧಿಸಿಲ್ಲ. ನಮಗೆ ಪಠ್ಯಗಳು ಸಿಗುವುದು ಒಂಬತ್ತನೇ ಶತಮಾನದಿಂದ. ಶಾಸನಗಳನ್ನು ಪಠ್ಯಗಳೆಂದು ಪರಿಗಣಿಸುವುದಾದರೂ ೫ನೇ ಶತಮಾನದಿಂದ ಅವು ಲಭ್ಯವಾಗಿವೆ. ಅಶೋಕನ ಬ್ರಹ್ಮಗಿರಿಯ ಶಾಸನದ 'ಇಸಿಲ' ಪದ, ಗ್ರೀಕ್ ಪ್ರಹಸನದಲ್ಲಿ ದೊರಕುವ ಕನ್ನಡ ಪದಗಳು, ಪ್ರಾಕೃತದಲ್ಲಿ ದೊರಕುವ ಕನ್ನಡ ಪದಗಳು ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ಒದಗಿಸಿಕೊಡುವಷ್ಟು ಪ್ರಮುಖ ದಾಖಲೆಗಳಲ್ಲ. ಮಹಾಭಾರತ ಮತ್ತು ಇನ್ನಿತರ ಗ್ರಂಥಗಳಲ್ಲಿ ದೊರಕುವ ಕರ್ನಾಟಕದ ಉಲ್ಲೇಖವೂ ನಮಗೆ ಬೇಕಾದ ಇತಿಹಾಸವನ್ನು ಕಟ್ಟಿಕೊಡುವಷ್ಟು ಶಕ್ತವಾಗಿಲ್ಲ. ನಮಗೆ ಇತಿಹಾಸ ಮತ್ತು ಪಠ್ಯ ಲಭ್ಯವಾಗುವುದು ಐದನೇ ಶತಮಾನದಿಂದ. ಮೊದಲನೇ ಚಹರೆಗೆ ಅಲ್ಲಿಂದ ದೊರಕುವ ಪಠ್ಯ ಮತ್ತು

ಇತಿಹಾಸ ಸಾಕು. ಐದನೇ ಶತಮಾನದಿಂದ ಲೆಕ್ಕ ಹಾಕಿದರೂ ಒಂದೂವರೆ ಸಾವಿರ ವರ್ಷಗಳ ಗಟ್ಟಿ ಪುರಾವೆಗಳು ನಮ್ಮ ಮುಂದಿವೆ.

ಎರಡನೆಯದು, ಪುರಾತನ ಸಾಹಿತ್ಯ/ಪಠ್ಯಗಳು ತಲೆತಲೆಮಾರುಗಳ ಜನರಿಂದ ಅತ್ಯಂತ ಮೌಲಿಕ ಪರಂಪರೆಯೆಂದು ಪರಿಗಣಿತವಾಗಿರಬೇಕು. ಒಂದೂವರೆ ಸಾವಿರ ವರ್ಷಗಳ ಕನ್ನಡ ಸಾಹಿತ್ಯ ಮತ್ತು ಪಠ್ಯಗಳನ್ನು ಕನ್ನಡ ಜನತೆ ಅತ್ಯಂತ ಶ್ರದ್ಧೆ, ಆಸಕ್ತಿಯಿಂದ ಅಧ್ಯಯನ ಮಾಡುತ್ತಿದ್ದಾರೆ, ತಮ್ಮ ಪರಂಪರೆಯ ಒಂದು ಭಾಗವೆಂದೇ ಪರಿಗಣಿಸಿದ್ದಾರೆ.

ಮೂರನೆಯದು, ಸಾಹಿತ್ಯಿಕ ಪರಂಪರೆ ಸ್ವೋಪಜ್ಞವಾಗಿದ್ದು, ಯಾವುದೇ ಬೇರೊಂದು ಭಾಷಾ ಸಮುದಾಯದಿಂದ ಸ್ವೀಕಾರವಾಗಿರಬಾರದು. ಇದು ಕನ್ನಡ ಸಾಹಿತ್ಯಿಕ ಸಂದರ್ಭದಲ್ಲಿ ಸಮರ್ಥಿಸಿಕೊಳ್ಳಲು ಕಷ್ಟವಾಗಿರುವ ಚಹರೆ. ಈ ಚಹರೆಯನ್ನು ತಮಿಳು ಭಾಷೆಯನ್ನು ಗಮನದಲ್ಲಿಟ್ಟುಕೊಂಡೇ ರೂಪಿಸಿದಂತಿದೆ. ಭಾರತದಂತಹ ಬಹು ಭಾಷಾ 'ಭಾಷಿಕ ಪ್ರದೇಶ'ಕ್ಕೆ ಈ ರೀತಿಯ ಚಹರೆಯೊಂದನ್ನು ನಿಗದಿ ಪಡಿಸುವುದನ್ನೇ ಪ್ರಶ್ನಿಸಬೇಕಾಗಿದೆ. ಪ್ರಾಚೀನ ಕಾಲದಲ್ಲಿ ಭಿನ್ನ ಪ್ರಾದೇಶಿಕ ವ್ಯತ್ಯಾಸಗಳಿದ್ದರೂ, ಸಾಂಸ್ಕೃತಿಕವಾದ ಒಂದು ಅಖಂಡತ್ವ ಇಡೀ ಆರ್ಯಾವರ್ತದಲ್ಲಿ ಹರಡಿದ್ದನ್ನು ಅಲ್ಲಗಳೆಯಲು ಬರುವುದಿಲ್ಲ. ತಮಿಳು ಭಾಷೆಯೂ ಕೂಡಾ ಶುದ್ಧಾಂಗ ಶುದ್ಧವಾಗಿ ಬೇರೆ ಸಂಸ್ಕೃತಿ ಮತ್ತು ಜ್ಞಾನ ನೆಲೆಗಳ ಯಾವ ಸಂಪರ್ಕವೂ ಇಲ್ಲದೆ ತನ್ನ ಸಾಹಿತ್ಯ ರೂಪಿಸಿಕೊಂಡಿದೆ ಎನ್ನುವ ಮಾತು ಇನ್ನೂ ಅನುಮಾನಗಳಿಂದ ಮುಕ್ತವಾಗಬೇಕಿದೆ. ಭಾಷೆ ಮತ್ತು ಸಂಸ್ಕೃತಿಗಳು ಸದಾ ಬೇರೊಂದು ಭಾಷೆಯ

ಮತ್ತು ಸಂಸ್ಕೃತಿಯ ಜೊತೆ ಸಂಪರ್ಕ ಇಟ್ಟುಕೊಂಡೇ ಇರುತ್ತವೆ. ಆದ್ದರಿಂದ ಈ ಚಹರೆಯನ್ನು ಆಧಾರವಾಗಿಟ್ಟುಕೊಂಡು ಕನ್ನಡ ಭಾಷೆಗೆ ಸಿಗಬೇಕಾದ ಸ್ಥಾನಮಾನಗಳನ್ನು ತಪ್ಪಿಸುವ ಹುನ್ನಾರವನ್ನು ಪ್ರತಿಭಟಿಸಬೇಕಾಗಿದೆ. 'ತಿರುವಳ್ಳುವರ್' ಅಂತಹ ಕೃತಿ ವೇದ, ಉಪನಿಷತ್ತುಗಳಿಂದ ಪ್ರಭಾವ ಹೊಂದಿಲ್ಲ ಎಂದು ನಿರ್ಣಾಯಕವಾಗಿ ಹೇಳಲು ಬರುವುದಿಲ್ಲ. ಕನ್ನಡದಂತಹ ಪ್ರಾಚೀನ ದ್ರಾವಿಡ ಭಾಷೆ ತಮಿಳಿಗಿಂತ ಭಿನ್ನವಾದ ಇನ್ನೊಂದು ಮಾದರಿಯನ್ನು ಒದಗಿಸುತ್ತದೆ ಎನ್ನುವ ದೃಷ್ಟಿಯಿಂದಲಾದರೂ ವಿಶೇಷ ಅಧ್ಯಯನಕ್ಕೆ ಅರ್ಹವಾದುದು. ಅದು ಪ್ರಾರಂಭದ ಸಾಹಿತ್ಯಿಕ ಹಂತದಿಂದಲೇ ನಾಲ್ಕು ಪ್ರಮುಖ ಮಾದರಿಗಳನ್ನು ನಮ್ಮ ಮುಂದೆ ತೆರೆದಿಟ್ಟಿದೆ. ಕನ್ನಡ – ಪ್ರಾಕೃತ ಸಂಬಂಧದ ವಡ್ಡಾರಾಧನೆ, ಕನ್ನಡ – ಸಂಸ್ಕೃತ ಸಂಬಂಧದ ವಿಕ್ರಮಾರ್ಜುನ ವಿಜಯಂ, ದೇಸಿ ನೆಲೆಯ ವಚನ ಸಾಹಿತ್ಯ ಮತ್ತು ಹೊರಗಿನ ಭಾಷಾ ಪ್ರಭಾವವನ್ನು ನಿರಾಕರಿಸುವ ಕಬ್ಬಿಗರ ಕಾವಂ ಇವೇ ಆ ನಾಲ್ಕು ಮಾದರಿಗಳು, ಈ ಮಾದರಿಗಳ ವಿಸ್ತೃತ ಅಧ್ಯಯನ ಕುತೂಹಲಕಾರಿಯಾದುದು. ತಮಿಳು ಉನ್ನತ ಅಧ್ಯಯನ ಕೇಂದ್ರ ರೂಪಿಸಿಕೊಂಡಿರುವ ಮುಖ್ಯ ಅಧ್ಯಯನಗಳಲ್ಲಿ ದ್ರಾವಿಡ ಭಾಷೆಗಳ ತೌಲನಿಕ ಅಧ್ಯಯನ ಹಾಗೂ ಈ ಭಾಷೆಗಳ ಭಾಷಿಕ ಸಂಪರ್ಕವೂ ಒಂದು. ಅದನ್ನು ಅಧ್ಯಯನ ಮಾಡುವುದಕ್ಕೆ ಬೇಕಾದ ಆಧಾರಗಳು ಹೆಚ್ಚಾಗಿ ಸಿಗುವುದು ಕನ್ನಡ ಸಾಹಿತ್ಯದ ನೆಲೆಯಲ್ಲಿ. ಆದ್ದರಿಂದ ಈ ಮೂರನೇ ಚಹರೆಯನ್ನು ಸ್ವಲ್ಪ ಮಟ್ಟಿಗೆ ಬದಲಾಯಿಸಿ ಕನ್ನಡ ಭಾಷೆಯ ಪ್ರಾಚೀನತೆಯನ್ನು

ಗಮನದಲ್ಲಿಟ್ಟುಕೊಂಡು ಅದಕ್ಕೆ ಸಿಗಬೇಕಾದ ಸ್ಥಾನಮಾನವನ್ನು ಮಾನ್ಯ ಮಾಡಬೇಕೆಂದು ಒತ್ತಡ ಹೇರಬೇಕಾಗಿದೆ.

ನಾಲ್ಕನೆಯ ಚಹರೆ, ಭಿನ್ನತೆ ಕನ್ನಡ ಭಾಷೆಯಲ್ಲಿ ತಮಿಳಿನಷ್ಟು ಎದ್ದು ಕಾಣದಂತಿದ್ದರೂ, ಆಧುನಿಕ ಕನ್ನಡಕ್ಕಿಂತ ಭಿನ್ನ ಎಂಬುದು ಎದ್ದು ಕಾಣುವಂತಿದೆ. ಕನ್ನಡ ಸಾಹಿತ್ಯದ ಉದ್ದಕ್ಕೂ 'ಮಾರ್ಗ' ಮತ್ತು 'ದೇಸೀ' ಪರಂಪರೆಗಳೆರಡೂ ತಮ್ಮ ಭಾಷಾ ಪ್ರವಾಹವನ್ನು ಸಮಾನಾಂತರವಾಗಿ ಕೊಂಡೊಯ್ದಿರುವುದು ಕುತೂಹಲಕಾರೀ ಅಂಶ. ಶಾಸನಗಳ ಸಾಹಿತ್ಯದಲ್ಲಿ ಸಂಸ್ಕೃತ ಭೂಯಿಷ್ಠವಾದ ಶಾಸನ ಸಾಹಿತ್ಯದ ಜೊತೆಜೊತೆಗೇ ಬಾದಾಮಿ ಶಾಸನದ "ಸಾಧುಗೆ ಸಾಧು......"ವಿನಂತಹ ಅಪ್ಪಟ ದೇಸಿ ಸಾಹಿತ್ಯವೂ ಒಡಮೂಡಿದೆ. ಕವಿರಾಜಮಾರ್ಗವಂತೂ ಸಂಸ್ಕೃತ ಮತ್ತು ದೇಸಿಯ ಹಿತಮಿತ ಮಿಶ್ರಣ. ಹತ್ತನೇ ಶತಮಾನದ ಸಂಸ್ಕೃತ ಪ್ರಭಾವವನ್ನು ಅಣಕಿಸುವಂತೆ ಹನ್ನೆರಡನೇ ಶತಮಾನದ ವಚನ ಸಾಹಿತ್ಯ ಹುಟ್ಟಿದೆ. ಹೀಗೆ ಮಾರ್ಗ, ದೇಸಿಗಳ ಜಕ್ಸ್ಟಪೊಸಿಷನ್ ಕನ್ನಡ ಭಾಷೆಯ ವಿಶಿಷ್ಟ ಗುಣ. ದ್ರಾವಿಡ ಭಾಷೆಗಳಲ್ಲಿ ಎರಡು ಪಾಚೀನ ಭಾಷೆಗಳಾದ ತಮಿಳು ಮತ್ತು ಕನ್ನಡ ಭಾಷೆಗಳು ಭಾರತದಂತಹ ಭಾಷಿಕ ಪ್ರದೇಶದಲ್ಲಿ 'ಅನನ್ಯತೆ' ಮತ್ತು 'ಸಮನ್ವಯತೆ' ಎರಡನ್ನೂ ಪ್ರತಿಪಾದಿಸುವ ಅದ್ಭುತ ಮಾದರಿಗಳು. ಈ ಎರಡೂ ಅದ್ಭುತ ಮಾದರಿಗಳಿಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರೆತಾಗಲೇ ವಿಸ್ತೃತ ಅಧ್ಯಯನ ಪೂರಕವಾಗಿರಲು ಸಾಧ್ಯ.

ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಭಾರತ ಸರ್ಕಾರ ತಾನು ಪ್ರಕಟಪಡಿಸಿರುವ ಮೂಲ ಚಹರೆಗಳಲ್ಲಿಯೆ ಮಾರ್ಪಾಟು ಮಾಡುವಂತೆ ಒತ್ತಡ ತರುವುದು ತುರ್ತಿನ ಕೆಲಸ. ಈಗ ಯುನೆಸ್ಕೊ ಪ್ರಕಟಿಸಿರುವ ಶಾಸ್ತ್ರೀಯ ಭಾಷೆಗಳ ಚಹರೆಗಳು ಭಾರತದ ಪ್ರಾಚೀನ ಭಾಷೆಗಳಿಗೆ ಅನ್ವಯವಾಗಬಾರದು. ಇದಕ್ಕೆ ಕಾರಣಗಳಿವೆ. ಮೊದಲಿಗೆ ಅವು ಭಾರತದಂತಹ ಬಹುಭಾಷಾ ಪ್ರದೇಶದಲ್ಲಿ ಆಡುತ್ತಿದ್ದ ಭಾಷೆಗಳಲ್ಲ. ಅವುಗಳನ್ನಾಡುತ್ತಿದ್ದ ಭಾಷಾ ಪ್ರದೇಶ ಏಕಭಾಷಾ ಪ್ರದೇಶಗಳು. ಮುಖ್ಯವಾಗಿ ಅವು ಧಾರ್ಮಿಕ, ಸಾಂಸ್ಕೃತಿಕ ಮತ್ತು ಆಡಳಿತಾತ್ಮಕ ಕಾರಣಗಳಿಗಾಗಿ ಬಳಕೆಯಾಗುತ್ತಿದ್ದವು. ನಮ್ಮ ಮುಂದೆ ಸಂಸ್ಕೃತದ ಉದಾಹರಣೆ ಇದೆ. ಸಂಸ್ಕೃತ ಸಾಮಾನ್ಯರ ಭಾಷೆಯಾಗುವಾಗ ಪ್ರಾಕೃತ ರೂಪ ಪಡೆಯಬೇಕಾಯಿತು. ಆದರೆ ಭಾರತದ ಭಾಷೆಗಳಿಗೆ ಮುಖ್ಯವಾಗಿ ದ್ರಾವಿಡ ಭಾಷೆಗಳಿಗೆ ಅಂತಹ ಸ್ಥಿತಿ ಇರಲಿಲ್ಲ. ಏಕಕಾಲದಲ್ಲಿ ಅವು ಧಾರ್ಮಿಕ, ಸಾಂಸ್ಕೃತಿಕ, ಆಡಳಿತಾತ್ಮಕ ಮತ್ತು ಸಾಮುದಾಯಿಕ ಭಾಷೆಗಳಾಗಿದ್ದವು. ಹಾಗಾಗಿ ಅವು ತಮ್ಮ ಸ್ವಂತಿಕೆಯ ಜೊತೆಗೆ ಅನ್ಯಭಾಷೆಗಳ ಸಂಪರ್ಕವನ್ನು ಸಾಧಿಸಿಕೊಳ್ಳಲೇಬೇಕಿತ್ತು. ಅಂಥ ಭಾಷಿಕ ಸ್ಥಿತಿಯ ಸಮರ್ಥ ಪ್ರಾತಿನಿಧೀಕರಣ ಇಂದು ಇರುವುದು ತಮಿಳು ಮತ್ತು ಕನ್ನಡ ಭಾಷೆಗಳಿಗೆ ಮಾತ್ರ. ಆ ದೃಷ್ಟಿಯಿಂದ ಅವೆರಡೂ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಪಡೆಯುವುದಕ್ಕೆ ಅರ್ಹವಾದವುಗಳು. ದುರದೃಷ್ಟವಶಾತ್ ಭಾರತ ಸರ್ಕಾರ ತಮಿಳುನಾಡು ಸರ್ಕಾರವನ್ನು ತೃಪ್ತಿ ಪಡಿಸಲು ತಮಿಳು ಭಾಷೆಯನ್ನು ಕ್ಲಾಸಿಕಲ್ ಲ್ಯಾಂಗ್ವೇಜ್

ಎಂದು ಏಕಪಕ್ಷೀಯವಾಗಿ ಘೋಷಿಸಿದೆ. ಈಗ ಒತ್ತಡ ಬಂದಿರುವುದರಿಂದ ಭಾಷಾ ವಿಜ್ಞಾನಿಗಳ ಒಂದು ಸಮಿತಿಯನ್ನು ನೇಮಿಸಿ ಕನ್ನಡದ ಹಕ್ಕೊತ್ತಾಯವನ್ನು ಪರಿಶೀಲಿಸುವಂತೆ ಕೇಳಿಕೊಂಡಿದೆ. ಆ ಸಮಿತಿ ಈಗಾಗಲೇ ಭಾರತ ಸರ್ಕಾರ ಪ್ರಕಟಿಸಿರುವ ಚಹರೆಗಳ ಹಿನ್ನೆಲೆಯಲ್ಲಿಯೇ ಕನ್ನಡದ ಬೇಡಿಕೆಯನ್ನು ಪರಿಶೀಲಿಸುವುದರಿಂದ ಬೇಡಿಕೆ ಈಡೇರುತ್ತದೆಂದು ನಂಬುವುದು ಹೇಗೆ?

– ಲಿಂಗದೇವರು ಹಳೆಮನೆ

'ಶಾಸ್ತ್ರೀಯ' ಭಾಷೆ : ಇದು ಪ್ರಸ್ತುತಗಲ್ಲಿ
ಸಾರ್ವಜನಿಕ ವೇದಿಕೆಗಳಲ್ಲಿ, ಮುದ್ರಣ
ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ,
ವ್ಯಾಪಕ ಚರ್ಚೆ, ವಾದ-ವಿವಾದಗಳಿಗೆ
ವಸ್ತುವಾಗಿರುವ ಪದ-ಪುಂಜ. ಕೇಂದ್ರ
ಸರಕಾರವು ನಮ್ಮ ನೆರೆರಾಜ್ಯದ ಪ್ರಾಚೀನ
ಭಾಷೆಯೊಂದಕ್ಕೆ ಅಧಿಕೃತವಾಗಿ
'ಶಾಸ್ತ್ರೀಯ' (ಕ್ಲಾಸಿಕಲ್) ಸ್ಥಾನವನ್ನು
ಕೊಟ್ಟಿರುವಾಗ ಅಷ್ಟೇ ಪ್ರಾಚೀನವಾದ
ನಮ್ಮ ಭಾಷೆಗೂ ಆ ಸ್ಥಾನ
ದೊರೆಯಬೇಕೆಂದು ಕೇಳುವುದು
ನ್ಯಾಯಯುತ.
ಮುಖ್ಯವಾಗಿ ಭಾಷಾವಿಜ್ಞಾನವಲಯಕ್ಕೆ
ಸೀಮಿತವಾಗಿರುವ ಈ ಪರಿಕಲ್ಪನೆಯನ್ನು
ಕುರಿತು ಎಲ್ಲರಿಗೂ ಮನವರಿಕೆಯಾಗುವಂತೆ,
ಸರಳ ಶೈಲಿಯಲ್ಲಿ ಬರೆಯಲಾದ ಕೃತಿ ಇದು.

ಶಾಸ್ತ್ರೀಯ ಭಾಷೆಯ ಪರಿಕಲ್ಪನೆ ಮತ್ತು ಸ್ವರೂಪ